MR. SPEAKER.—I do not understand the statement made by my Hon'ble friend, Sri Bheemappa Naik. We have got only three days including today. Where have we got time to extend? According to schedule we have to finish the Budget by 30th March and there is no day available for us. Otherwise we have to cut short the holidays which you have agreed to. If you agree to cut short the holidays, I have no objection to extend it.

SRI K. PATTABHIRAMAN.—May I suggest one thing, Sir. Let us take up this question after cooler hours, that is, after the Lunch hour.

SRI K. HANUMANTHAIYA.—We cannot decide the time-table for the discussion by everybody. It has to be looked into by Government, and it is a wellknown practice that the Leader of the House and the Leader of the Opposition and the Speaker have to decide some of these things. It is not as if everybody can make a suggestion, and even that much latitude is not allowed.

Mr. SPEAKER.—Now we shall rise for lunch and meet at 3-30.

The House adjourned for Lunch at Two Minutes past Three of the Clock and reassembled at Thirty Minutes Past Three of the Clock.

[MR. SPEAKER in the Chair]

Sri Mulka GOVINDA REDDY (Chitaldroog).—May I suggest that we may sit till 7 o'clock every day, so that other members may be given some more time to speak on the Budget ?

Mr. SPEAKER.—I have no objection if the Hon'ble Members agree.

Sri Pattabhiraman can continue his speech.

Sri A. V. NARASIMHAREDDY (Bangalore South).—My suggestion is that the session may be continued till 7O'clock for three days and more members be allowed to speak on the Budget.

Sri L. SIDDAPPA (Chennagiri).—We shall extend by one hour and continue till 6 O'clock.

Sri K. PATTABHIRAMAN.—I will not take much of your time. I wanted to emphasise two or three other points that arise from the Budget statement of the Finance Minister. The first and foremost of them, in my opinion, in point of importance is the remarks that he has made—very welcome remarks—in regard to the development of the Bhadravati Iron and Steel Works. I feel that the attitude of the Government of India to develop another Steel Plant, perhaps, of the same magnitude in the same proportion in some other part of South India, may, in addition, lead to duplication. To that extent, the advantage, natural or otherwise, which the finished industry would otherwise give, would be denied in a new undertaking of that kind; and it would be very helpful and very useful that the Central Government should take kindly to the suggestion made by the Finance Minister and give additional facilities such as to increase the output and the out-turn of the Bhadravati Iron and Steel Works. At this stage, I am always of the opinion and I would like to declare it once again that in regard to large undertakings like Iron and Steel Works, which are major industries, which in addition to giving some other industrial advantage have almost an international significance of they own, wherever they are located, they must be taken up in a new light altogether. It should be the concern of the Government of India and such assistance as is needed by the Iron Works in its international setting as it were, should be available and to that extent I am wholeheartedly in sympathy and in agreement with the remarks made by the Finance Minister.

Then, Sir, there are two other questions to which I want to make a reference, that is, the question of the public services. No doubt the Chief Minister has made a reference to some of the advantages that he would like to confer on the Non-gazetted Officers. I am making a reference to the plight and the positson of the Non-gazetted Officers not merely to evoke sympathy but also to emphasis upon the justice of their demands. I personally feel, that it is quite possible to give financial assistance and enlarge their emoluments. But there are certain perquisites which could certainly be given in addition to the medical facilities that was referred to in the Finance Minister's speech. There are other concessions also which the other Governments have shown to their Non-gazetted Officers. Other Governments which are around us have taken some steps in that direction. And I make this also because, after all is said and done, a time has come and I have been emphasising it from the very beginning of 1952 that the salary structure of the public services must be scientifically stuided and a new structure must be laid down. Today it has not got any particular basis and it would be difficult to say why a particular individual or a particular officer gets a certain salary and another does not. It will be very difficult to opportion this and assign any scientific data. Therefore, I feel that, just as in western countries where the salary structure is always

(SRI K. PATTABHIRAMAN.)

evolved on a scientific basis so that it could not admit of any grievances or any opposition from any person, we may do the samething here. The contentment that has been ensured in this evolution of the salary of clerks in the western countries has gone a great deal in working up successfully the democratic set up of their Government. I feel, an attempt has to be made in Mysore at any rate now considering the several demands that we are hearing from the electric workers from the non-gazetted officers, from the clerks and from policemen and in fact from almost all sections of the subordinate public services; these are all justifiable grievances. Their lot has not been bettered though they deserved it. It is not merely that I am asking for some doles to be meted out to the services by the Government; I feel a time has come when we should consider the salary structure as a whole—correlated to the State finances, correlated to the income of each individual to the living index correlated to all these special factors, which really go to make a case for the evolution of the salary structure. It is that that I want to impress on you. My own feeling is that, if this attempt is made, much of the lower strata of the public services will have to be given additional facilities and their lot has improved. That is one suggestion that I am going to make.

I would refer only to the last paragraph of the Finance Minister's speech and with that I may conclude. There is certainly a genuine feeling expressed by the Finance Minister when he made that question, that, shorn of party and personal consideration, good of the state must certainly enlighten and should inform the activities and all actions of all public men. That statement which he has made, I am sure everyone in this House will certainly echo and reciprocate. Speaking for myself, it has been my privilege eversince these three years, irrespective of every reaction, I have stuck to this policy from the very beginning. That in the year 1955 this feeling has come and the Chief Minister, from his own responsible place as the Chief Minister of an important and progressive State like Mysore, has given expression to it is a welcome departure. I am looking forward to better days. So far as I am concerned, I have always been showing the hand of co-operation. And I am also glad that the Leader of the Opposition has also reciprocated this feeling. The next two years that we are in this House, I expect this spirit of comradric, the spirit of friendship and friendliness which has been thus expressed by the Chief Minister shall prevail. The Leader of the Opposition representing—not the Opposition in the Western sense which, I always deprecate, but only in the sense of an occasion for clash of ideas, exchange of thought to bring out the truth better than otherwise would also agree. And I hope the suggestions made by me in the course of my speech will commend themselves to the Chief Minister, so thht in the next year when we meet again after these 12 months, we may have envolved a system of finances such as to leave the finance of the State on stronger foundation, so that we may face the future with courage and there will be nothing that we must feel for or that we must be apologetic about and with that self-confidence we may face the future. In that context, Sir, I reciprocate the very good expressions made by the Chief Minister. With these few remarks, I conclude my remarks on this very important subject, namely, the Budget.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಮಾನ್ಯ ಅಧ್ಯಕ್ಷರೇ 1955-56ನೆಯ ಸಾಲಿನ ಬಡ್ಜೆಟ್ಟಿನಮೇಲೆ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಇಮಾಂ ರವರೂ ಮತ್ತು ಈ ಮಾನ್ಯ ಸಭೆಯ ಪ್ರಮುಖ ಸದಸ್ಯರಲ್ಲೊಬ್ಬರಾದ ಶ್ರೀಮಾನ್ ಪಟ್ಟಾಭಿರಾಮನ್‌ರವರೂ ಕೂಡ ಮಾತನಾಡಿದ್ದಾರೆ. ಈ ಇಬ್ಬರು ಮಾನ್ಯ ಸದಸ್ಯರ ಭಾಷಣವನ್ನು ಕೇಳಿದ್ದರಿಂದ ತುಂಬ ಉಪಕಾರವಾಗಿದೆ. ಈ 1955-56ನೆಯ ಸಾಲಿನ ಬಡ್ಜೆಟ್ಟಿನ ವಿಚಾರವಾಗಿ ಹೆಚ್ಚು ತಿಳಿವಳಿಕೆಯನ್ನು ಪಡೆಯುವುದಕ್ಕೆ ಅವರ ಭಾಷಣ ಬಹಳ ಸಹಾಯಕವಾಗಿದೆಯೆಂದು ನಾನು ಭಾವಿಸುತ್ತೇನೆ. ಅವರ ಭಾಷಣಗಳನ್ನು ಕೇಳಿದಮೇಲೆ ಕಾಂಗ್ರೆಸ್ ಪಕ್ಷದ ಸರ್ಕಾರ ಸುಖರಾಜ್ಯ ಸ್ಥಾಪನೆಯ ಹಾದಿಯಲ್ಲಿ ಸ್ಥಿರವಾದ, ದೃಢವಾದ ಹೆಜ್ಜೆಯನ್ನಿಡಲು ಶ್ರಮಿಸುತ್ತಿದೆಯೆಂದು ಅರ್ಥವಾಗುತ್ತದೆ. ಶ್ರೀಮಾನ್ ಇಮಾಂರವರು, ಅವರೇ ಹೇಳಿದ ಹಾಗೆ, ಕಳೆದ ಆರು ಸಾಲುಗಳಿಂದಲೂ ಇದೇ ರೀತಿ ಭಾಷಣ ಮಾಡುತ್ತಿದ್ದಾರೆ, ನಾನೂ ಕೂಡ ಕೇಳುತ್ತಿದ್ದೇನೆ; ಅವರ ಎಲ್ಲ ಬಡ್ಜೆಟ್ ಭಾಷಣದಲ್ಲೂ ಒಂದೇ ಧೋರಣೆ, ಒಂದೇ ನಿರಾಶಾ ಭಾವನೆ ಕಾಣುತ್ತಿ

ಡೆಯೇ ಹೊರತು, ಅವರ ಯಾವ ಬಡ್ಜೆಟ್ ಭಾಷಣದಲ್ಲೂ ಆಶಾಭಾವನೆ ಕಂಡುಬಂದಿಲ್ಲ. ಈ ಆರು ವರುಷಗಳಲ್ಲಿ ದೇಶ ಬಹಳ ಪ್ರಗತಿಯನ್ನು ಸಾಧಿಸಿದೆ, ಜನಜೀವನ ಸುಧಾರಿಸಿದೆ, ರಾಜ್ಯಾಂಗ ಶಾಸನದಲ್ಲಿ ನಾವು ಯಾವುದನ್ನು ಸೂತ್ರವಾಗಿಟ್ಟುಕೊಂಡಿದ್ದೇವೋ ಆ ಗುರಿಯನ್ನು ಸಾಧಿಸುವುದರಲ್ಲಿ ಎಷ್ಟು ಸಫಲತೆಯನ್ನು ಪಡೆದಿದ್ದೇವೆಂಬುದನ್ನು ಜನರು ನೋಡುತ್ತಿದ್ದಾರೆ. ಆದ್ದರಿಂದ, ಶ್ರೀಮಾನ್ ಇಮಾಂರವರ ಭಾಷಣ ನಿರಾಶೆಯಿಂದ ಕೂಡಿದೆ. ನಮ್ಮ ಆಡಳಿತ ಆಶಾ ಭಾವನೆಯಿಂದಲೇ ಕೂಡದೆ, ಪ್ರಗತಿಯನ್ನೂ ಸಾಧಿಸಿದೆ. ಶ್ರೀಮಾನ್ ಪಟ್ಟಾಭಿರಾಮ್‌ರವರು ಮಾತನಾಡುತ್ತಾ, ಸೋಷಿಯಲಿಸ್ಟ್ ಪ್ಯಾಟರ್ನ್ ಎನ್ನುವುದು ಪಾಶ್ಚಿಮಾತ್ಯ ದೇಶದ ಜನರಿಗೆ ಅರ್ಥವಾಗುವುದಕ್ಕೆ ಆರಿಸಿದ ಒಂದು ಪದ ಸಮೂಹ, ಅದಕ್ಕೆ ಬದಲಾಗಿ ಸರ್ವೋದಯ ಸಮಾಜವನ್ನು ಕಟ್ಟುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ ಎಂದು ಹೇಳಿದ್ದರೆ ನಮ್ಮ ದೇಶದ ಜನತೆಗೆ ಹೆಚ್ಚಿಗೆ ಅರ್ಥವಾಗುತ್ತಿತ್ತು ಎಂದು ಹೇಳಿದರು. ಆದರೆ, Socialistic Pattern ಎಂದರೆ ನಾವಾದರೂ ಅರ್ಥಮಾಡಿಕೊಂಡಿರುವುದು ಸರ್ವೋದಯ' ಎಂತಲೇ. ಸರ್ಕಾರ ಯಾವ ನೀತಿಯನ್ನು ಅವಲಂಬಿಸುತ್ತಿದೆ, ಯಾವ ಮಾರ್ಗವನ್ನನುಸರಿಸಿ ತನ್ನ ಕೆಲಸ ಕಾರ್ಯಗಳನ್ನು ನಡೆಸುತ್ತಿದೆ ಎಂಬುದು ಮುಖ್ಯವೇ ಹೊರತು ಪದ ಸಮೂಹ ಮುಖ್ಯವಲ್ಲ. ಸರ್ವೋದಯ ಸಮಾಜವನ್ನು ರಚನೆ ಮಾಡತಕ್ಕದ್ದು, ಆ ಹಾದಿಯಲ್ಲಿ ನಡೆದು ಸರ್ವೋದಯ ಸಮಾಜವನ್ನು ಕಟ್ಟಬೇಕೆಂಬುದೇ ಭಾರತ ಸರ್ಕಾರದವರ ನಿಲುವು ಮತ್ತು ಧೋರಣೆ. ಅವರ ಕಾರ್ಯರಂಗದ ಚಟುವಟಿಕೆಯೂ ಅದೇ ರೀತಿಯಾಗಿದೆ.

ಹೀಗೆ ಅವರು ಈ ಪಾಂಚವಾರ್ಷಿಕ ವರದಿಯಲ್ಲಿ ಕಂಡಂತೆ ಏನೇನು ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗಬೇಕೆಂದಿತ್ತೋ ಅವುಗಳನ್ನೆಲ್ಲಾ ಮಾಡಿದ್ದಾರೆ. ಅದೇನೋ ಪ್ರತಿಯೊಂದು ಸಲವೂ ಈ ಕಾಂಗ್ರೆಸ್ ಪಕ್ಷದ ಸರ್ಕಾರವನ್ನು ಜರಿಯದೆ ಇದ್ದರೆ ಶ್ರೀ ಇಮಾಂರವರ ಮನಸ್ಸಿಗೆ ಸಮಾಧಾನವೇ ಇದ್ದಂತೆ ಕಾಣುವುದಿಲ್ಲವೆಂದು ತೋರುತ್ತಿದೆ. ಈ ದಿವಸ ಕೂಡ ಅವರು ಭಾಷಣ ಮಾಡುತ್ತ ಹೇಳಿದರು 'ಕಾಂಗ್ರೆಸ್ ಸರ್ಕಾರದ ರೀತಿ ನೀತಿಯ consequences are far reaching and in fact disastrous' ಎಂದು. ಈ ಪಾಂಚವಾರ್ಷಿಕ ಯೋಜನೆಯ ಬಗ್ಗೆ ಮಾತನಾಡುತ್ತ 'Consequences are far reaching and in fact disastrous' ಎಂದು ಹೇಳಿದರು. ಅದಕ್ಕೆ ನಾನು ಶ್ರೀಮಾನ್ ಇಮಾಂರವರಿಗೆ ಹೇಳುತ್ತೇನೆ—ಹೀಗೆ ನೀವು ಈ ದಿವಸ ತೆಗೆದುಕೊಂಡಿರತಕ್ಕಂಥ ಒಂದು ನಿಲುವು ಏನಿದೆಯೋ ಅದರ (Consequences) ಪರಿಣಾಮದಿಂದ ನಿಮ್ಮ ಪಕ್ಷಕ್ಕೆ ಬಹಳ ಕೆಟ್ಟದ್ದು (disastrous) ಆಗುತ್ತದೆ ಎಂದು. ನಿದರ್ಶನಕ್ಕೆ ಆಂಧ್ರದಲ್ಲಿ ಮೊನ್ನೆತಾನೆ ನಡೆದ ಚುನಾವಣೆಗಳ ಫಲಿತಾಂಶವೇ ಸಾಕ್ಷಿ. ಈ ದಿವಸ ಇವರು ಆ ಒಂದು ಭಯದ ಭ್ರಾಂತಿಯನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಂಡು ಹೀಗೆ ಮಾತನಾಡಿರುತ್ತಾರೆಂದು ನಾನು ಭಾವಿಸುತ್ತೇನೆ. ನಾವಾದರೋ ದೇಶದಲ್ಲಿ ಸಾರ್ವಜನಿಕರ ಬೆಂಬಲವನ್ನು ಸಂಪೂರ್ಣವಾಗಿ ಗಳಿಸಿಕೊಂಡಿದ್ದೇವೆ. ಆದರೆ ನಾವು ಈ ದಿವಸ ನಮ್ಮ ರಾಜ್ಯವನ್ನು ಒಂದು ಸುಖೀರಾಜ್ಯವನ್ನಾಗಿ ಪರಿವರ್ತನೆ ಮಾಡಬೇಕೆಂಬ ಹಾದಿಯಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿರಬಹುದು. ಹೀಗೆ ಭಿನ್ನಾಭಿಪ್ರಾಯ ತಲೆದೋರದ ಹಾಗೆ ಈ ಪ್ರಜಾಪ್ರಭುತ್ವದ ದಿನಗಳಲ್ಲಿ ಯಾವ ಕೆಲಸವೂ, ಯಾವ ಆಡಳಿತವೂ ಕೂಡ ನಡೆಯುಲಾರದು ಎಂಬ ಅಂಶ ಸರ್ವರಿಗೂ ತಿಳಿದಿರತಕ್ಕದ್ದೇ ಆಗಿದೆ. ಹೀಗೆ ಒಂದು ದೇಶಕ್ಕೇ ಸಂಬಂಧಪಟ್ಟಂಥ, ದೇಶದ ಎಲ್ಲಾ ಜನಗಳಿಗೂ ಅನ್ವಯಿಸತಕ್ಕಂಥ ಸಮಸ್ಯೆಗಳನ್ನು ಬಗೆಹರಿಸತಕ್ಕ ಕಾಲದಲ್ಲಿ ಪ್ರಜಾಪ್ರತಿನಿಧಿಗಳಿಗೆ ಅನೇಕ ಹೊಸ ಸಮಸ್ಯೆಗಳು ತಲೆದೋರುವುದು ಸ್ವಾಭಾವಿಕ. ಹಾಗೆ ನಾವು ಅವುಗಳನ್ನು ಮಥನ ಮಾಡುವಾಗ, ಅವುಗಳ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುವಾಗ ಇಂಥ ಕೆಲವು ಭಿನ್ನಾಭಿಪ್ರಾಯಗಳು ಬಾರದೆ ಗತ್ಯಂತರವಿಲ್ಲ. ಇಷ್ಟನ್ನೇ ಅವರು ಒಂದು ದೊಡ್ಡದನ್ನಾಗಿ ಮಾಡಿಕೊಂಡು ಇದೇ ದೇಶದಲ್ಲೆಲ್ಲಾ ಸಂಪೂರ್ಣವಾಗಿ ಹರಡಿಕೊಂಡಿದೆ, ಇದರಿಂದ ದೇಶದ ಆಡಳಿತದ ಮೇಲೆ ಒಂದು ದುಷ್ಪರಿಣಾಮ ಉಂಟಾಗುತ್ತದೆ ಎಂದು ಅವರು ಹೇಳಿರತಕ್ಕದ್ದು ನಿಜವಾದುದಲ್ಲ. ಇದಕ್ಕೆ ನಾವು ದೇಶದಲ್ಲಿ ಸಾಧಿಸುತ್ತಿರುವ ಪ್ರಗತಿದಾಯಕವಾದ ಕಾರ್ಯಗಳೇ ಸಾಕ್ಷಿಯಾಗಿವೆ, ನಿದರ್ಶನವಾಗಿ ಉಳಿದಿವೆ. ಇಷ್ಟೇಅಲ್ಲದೆ ಶ್ರೀಮಾನ್ ಇಮಾಂರವರು ಬಡ್ಜೆಟ್ಟಿನಮೇಲೆ ಮಾತನಾಡುವಾಗ ಈ ಖೋತಾ ಬಡ್ಜೆಟ್ ವರ್ಷೇ ವರ್ಷೇ ಏರುತ್ತಿದೆ, ಹೋದವರ್ಷ ಇದ್ದಂಥ ಖೋತಾ ಬಡ್ಜೆಟ್ಟಿಗಿಂತಲೂ ಈ ವರ್ಷದ ಖೋತಾ ಬಡ್ಜೆಟ್ ಇನ್ನೂ ಜಾಸ್ತಿಯಾಗಿದೆ ಎಂದು ಹೇಳಿದರು. ಆದರೆ ನಮ್ಮ ಮಾನ್ಯ ಹಣಕಾಸಿನ ಸಚಿವರು ಮಾಡಿರತಕ್ಕಂಥ ಭಾಷಣವನ್ನು ನೋಡಿದರೆ, ನಮ್ಮ ಸರ್ಕಾರದ ರೆವಿನ್ಯೂ ಎಷ್ಟು ಹೆಚ್ಚಿದೆ ಮತ್ತು ನಮ್ಮ ಸರ್ಕಾರದ ಈ ಪಂಚವಾರ್ಷಿಕ ಯೋಜನೆಯ ಬಗ್ಗೆ ಎಷ್ಟು ಹಣವನ್ನು ಖರ್ಚುಮಾಡುತ್ತಿದೆ ಅನ್ನುವುದು ಸುಲಭವಾಗಿ ಗೊತ್ತಾಗುತ್ತದೆ. ಅವರು ಮಾಡಿರತಕ್ಕ ಭಾಷಣವನ್ನು ನೋಡಿದರೆ, ನಮ್ಮ ರೆವಿನ್ಯೂಗೆ ಸಂಬಂಧಪಟ್ಟಿರುವ ಹಾಗೆ 516 ಲಕ್ಷ ರೂಪಾಯಿಗಳನ್ನು ಈ ಪಾಂಚವಾರ್ಷಿಕ ಯೋಜನೆಯೊಳಗೆ ಬರತಕ್ಕಂಥ ಬಾಬುಗಳನ್ನು ಕಾರ್ಯಗತ ಮಾಡುವುದಕ್ಕಾಗಿ ಖರ್ಚು ಮಾಡುವುದಾಗಿ ಅವರು ತಿಳಿಸಿದ್ದಾರೆ. ಹೀಗೆ ಈ 516 ಲಕ್ಷ ರೂಪಾಯಿಗಳನ್ನು ನಮ್ಮ ಆದಾಯದಿಂದ ಈ ಪಾಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕಾಗಿ ಅವರು ಖರ್ಚುಮಾಡುವುದನ್ನೂ ಸಹ ಇವರು ಲೆಕ್ಕಹಾಕಿಕೊಂಡದ್ದರಿಂದ ಹಾಗೆ ದಿಗ್ಭ್ರಮೆಯಾಗಿರುತ್ತದೆಯೇ ಹೊರತು ಇದೇನೂ ಅಂಥ ಖೋತಾ ಬಡ್ಜೆಟ್ಟಾಗಿಲ್ಲ. ಇದರ ಬಗ್ಗೆ ನಾವುಯಾರೂ ಅಷ್ಟು ಭಯಪಡಬೇಕಾಗಿಲ್ಲ. ನಾವು ಒಂದು ದೇಶವನ್ನು ಪುನರ್ರಚನೆ ಮಾಡುವ ಕಾಲದಲ್ಲಿ—ದೇಶದ ಜನಗಳಿಗೆ ಯಾವ ಒಂದು ಸಂಪತ್ ಸಮೃದ್ಧಿಯೂ ಇಲ್ಲದಿರುವಾಗ, ಅಂಥ ಒಂದು ಅನುಕೂಲವನ್ನು ಜನರಿಗೆ ಕಲ್ಪಿಸಿಕೊಡುವಾಗ ಹಣವನ್ನು ಖರ್ಚುಮಾಡಬೇಕಾದದ್ದು ಸ್ವಾಭಾವಿಕವಾಗಿಯೇ ಇದೆ. ಆದರೆ ಹೀಗೆ ಜನರಿಗೆ ಅನುಕೂಲ ಕಲ್ಪಿಸುವುದರಿಂದ ನಮ್ಮ ಬಡ್ಜೆಟ್ ಖೋತಾ ಆಗಿಬಿಡುತ್ತದೆ. ಎಂಬೊಂದು ಕಾರಣದಮೇಲೆ ಹಾಗೆ ಖರ್ಚುಮಾಡುವುದನ್ನು ನಿಲ್ಲಿಸುವುದಕ್ಕೆ ಖಂಡಿತ ಸಾಧ್ಯವಾಗುವುದಿಲ್ಲವೆಂಬುದು ಮಾನ್ಯ ಇಮಾಂರವರಿಗೂ ಕೂಡ ಚೆನ್ನಾಗಿ ಗೊತ್ತಿದೆ. ವಾಸ್ತವಾಂಶಗಳು ಹೀಗಿದ್ದಾಗ್ಯೂ ಶ್ರೀ ಇಮಾಂ ರವರು ಪದೇ ಪದೇ ತಮ್ಮ ಭಾಷಣದಲ್ಲಿ ನಮ್ಮ ಬಡ್ಜೆಟ್‌ನಲ್ಲಿ ವರ್ಷೇ ವರ್ಷೇ ಖೋತಾ ಹೆಚ್ಚಾಗುತ್ತಿದೆ, ಇದರಿಂದ ಮುಂದಕ್ಕೆ ನಮ್ಮ ಹಣ ಕಾಸಿನಮೇಲೊಂದು ದುಷ್ಪರಿಣಾಮ ಉಂಟಾಗುತ್ತದೆ ಎಂದು ಅವರು ವಾದಿಸುತ್ತಿರುವುದರಲ್ಲಿ ಎಳ್ಳಷ್ಟೂ ಸತ್ಯಾಂಶವಿಲ್ಲ. ಶ್ರೀಮಾನ್ ಇಮಾಂರವರು ಹೀಗೆ ನಮ್ಮ ಮೈಸೂರಿನ ಹಣಕಾಸಿನ

(ಶ್ರೀ ಕೆ. ಪುಟ್ಟಸ್ವಾಮಿ.)

ಪರಿಸ್ಥಿತಿಯನ್ನೊಂದೇ ಅಲ್ಲದೆ ಇಂಡಿಯಾ ಸರ್ಕಾರದ ಹಣಕಾಸಿನ ನೀತಿಯನ್ನೂ ಕೂಡ ಪ್ರಸ್ತಾಪಿಸಿರುತ್ತಾರೆ. ಹಾಗೆ ಪ್ರಸ್ತಾಪಿಸುತ್ತ ಈಗಿನ ಸರ್ಕಾರದವರು ಜನರಿಗೆ ಎಷ್ಟು ಸಂದರ್ಭಗಳಲ್ಲಿ ತೆರಿಗೆ ವಿನಾಯ್ತಿಗಳನ್ನು ಕೊಟ್ಟಿದ್ದಾರೆ, ಎಷ್ಟು ಜನ ರೈತರಿಗೆ ಕಂದಾಯ ಮಾಫಿಮಾಡಿ ಸಹಾಯಮಾಡಿದ್ದಾರೆ ಎಂದು ಕೇಳಿದರು. ಹಾಗೇ ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತ ಅವರು ಸಮಾಜದ ಸೋಷಿಯಲ್ ಸೆಕ್ಯೂರಿಟಿಗಾಗಿ ಹಣವನ್ನೇನೂ ಮುಡುಪಾಗಿಟ್ಟಿಲ್ಲವೆಂದೂ ಹೇಳಿದರು. ಆದರೆ ಇದರ ಸಂಬಂಧವಾಗಿ ನಾನು ಅವರಿಗೊಂದು ಮಾತು ಹೇಳಬೇಕಾಗಿದೆ—ದೇಶದಲ್ಲಿ ಹುಟ್ಟತಕ್ಕ ಪ್ರತಿಯೊಬ್ಬ ಪ್ರಜೆಗೂ ಒಂದು ಸರಿಯಾದ ಸ್ಥಾನ ಮಾನವನ್ನು ಒದಗಿಸಿಕೊಡಬೇಕಾಗಿರುವುದರಿಂದ—ಆ ವಿಚಾರವನ್ನು ನಾವು ಬರಿ ಬಾಯಿಂದ ಹೇಳಿದರೆ ಅದು ಆಗುವುದಿಲ್ಲ. ಆದುದರಿಂದ ಅದು ಕಾರ್ಯಗತವಾಗಬೇಕಾಗಿದ್ದರೆ ಸರ್ಕಾರ ಹಣವನ್ನು ಖರ್ಚುಮಾಡಬೇಕಾದದ್ದು ಅತ್ಯಗತ್ಯ. ಅಂಥ ಒಂದು ಪರಿಸ್ಥಿತಿ ಉಂಟಾಗಿರುವಾಗ ನಾವು ಹಣವನ್ನು ಹಾಗೆಯೇ ಕೂಡಿಡುವಂಥ ಪರಿಸ್ಥಿತಿಯಲ್ಲಿಲ್ಲ. ಇಂಥ ವಿಷಯಗಳಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣವನ್ನೊದಗಿಸಿದ್ದಾರೆಂಬುದನ್ನು ಅವರು ಲೆಖ್ಖ ಹಾಕಿ ನೋಡಿ ಮಾತನಾಡದೆ— ಸುಮ್ಮನೆ ಇವರು ಎಲ್ಲೆಲ್ಲಿ ಕಂದಾಯವನ್ನು ಕಡಮೆ ಮಾಡಿದ್ದಾರೆ ಎಂದು ಕೇಳಿದ್ದು ಸರಿಯಲ್ಲ. ಈ ನಾನಾ ಬಾಬುಗಳಿಗಾಗಿ ಹಣವನ್ನು ಒದಗಿಸತಕ್ಕ ಪ್ರಯತ್ನದಲ್ಲಿ ನಮ್ಮ ಸರ್ಕಾರ ಎಷ್ಟು ಪ್ರಾಮುಖ್ಯವಾದ ಸಾಧನೆಗಳನ್ನು ಮಾಡಿದೆ ಎನ್ನುವುದನ್ನು ಅವರ ತಿಳಿಯಬೇಕಾಗಿದ್ದರೆ, ಇಂಡಿಯಾ ಸರ್ಕಾರದವರ ಆದಾಯ ತೆರಿಗೆಯ ನೀತಿಯನ್ನು ತಾವು ಪರಿಶೀಲನೆ ಮಾಡಿ ನೋಡಿದರೆ ಅದು ತಮಗೆ ಸಂಪೂರ್ಣವಾಗಿ ವ್ಯಕ್ತವಾಗುತ್ತದೆಂದು ಸೂಚಿಸಲಿಚ್ಛಿಸುತ್ತೇನೆ. ಇಂಡಿಯಾ ದೇಶದ ಆರ್ಥಿಕ ಸಚಿವರಾದ ಶ್ರೀ ಸಿ. ಡಿ. ದೇಶಮುಖ್‌ರವರು ದೇಶದ ಆದಾಯ ತೆರಿಗೆ ದರದ ಪ್ರಕಾರ ಲೆಖ್ಖಹಾಕಿದರೆ 1 ಲಕ್ಷ ರೂಪಾಯಿಗಳ ವರಮಾನವಿರತಕ್ಕವನಿಗೆ ತೆರಿಗೆ ಕೊಟ್ಟು ಉಳಿಯುವುದೆಲ್ಲಾ ಕೇವಲ 59 ಸಾವಿರ ಮಾತ್ರ ಎಂದು ಅವರು ತಿಳಿಸಿದ್ದಾರೆ. 5 ಲಕ್ಷದ ವರಮಾನವಿದ್ದರೆ 94 ಸಾವಿರ ಉಳಿತಾಯವಿದೆಯೆಂದು ಹೇಳಿದ್ದಾರೆ. ಸಾಲಿಯಾನ 5 ಲಕ್ಷ ವರಮಾನವಿರತಕ್ಕವನಿಗೆ ಮಾಹೆಯಾನ 8 ಸಾವಿರಕ್ಕಿಂತ ಕಡಮೆ ಉಳಿತಾಯವಾಗಬಹುದೆಂದು ಹೇಳಬಹುದು. ಹೀಗೆ ನಮ್ಮಲ್ಲಿ ತಿಂಗಳಿಗೆ 8 ಸಾವಿರ ರೂಪಾಯಿಗಳನ್ನು ಉಳಿಸತಕ್ಕಂಥವರು ಯಾರೂ ಹೆಚ್ಚುಮಂದಿ ಇರುವಂತೆ ಕಾಣುವುದಿಲ್ಲ. ಸುಖೀ ರಾಜ್ಯವನ್ನು ಕಟ್ಟಬೇಕಾದರೆ ಹಣವನ್ನು ಖರ್ಚು ಮಾಡಲೇ ಬೇಕಾಗಿದೆ. ಅದಕ್ಕಾಗಿ ಕೇಂದ್ರ ಸರ್ಕಾರ ಮತ್ತು ಸಂಸ್ಥಾನ ಸರ್ಕಾರಗಳೆರಡೂ ಶ್ರಮಿಸುತ್ತಿವೆ, ಈ ಕಾರ್ಯಕ್ರಮವು ಬಹು ತ್ವರಿತವಾಗಿ ನೆಡೆಯುತ್ತಿದೆ. ಈ ಕಾರ್ಯದಿಂದ ನಮಗೆ ಮುಂದೆ ಬೇಕಾದಷ್ಟು ಪ್ರತಿಫಲಬರುತ್ತದೆ ಎಂದು ನಾನು ಹೇಳಲಿಚ್ಛಿಸುತ್ತೇನೆ.

ಇನ್ನು ಶ್ರೀಮಾನ್ ಇಮಾಂರವರು ಕೆಲವು ಅಂಕಿ ಅಂಶಗಳನ್ನು ತೆಗೆದುಕೊಂಡು ಟೀಕೆ ಮಾಡಿದ್ದಾರೆ. ಆದರೆ ಹಾಗೆ ಅವರು ಮಾತನಾಡುವಾಗ ತಮ್ಮ ಮನಸ್ಸಿಗೆ ತೋರಿದ ಕೆಲವು ಅಂಕಿ ಅಂಶಗಳನ್ನು ಮಾತ್ರವೇ ಅವರು ತೆಗೆದುಕೊಂಡಿದ್ದಾರೆ. ಈಗ ನಮ್ಮ ದೇಶದಲ್ಲಿ 4·9 ಕೋಟಿ ಡಿಫಿಸಿಟ್ ಆಗುತ್ತದೆ; ನಾಲ್ಕೈದು ವರ್ಷಗಳಿಂದ ಇಲ್ಲದೆ ಇದ್ದಂಥ ಡಿಫಿಸಿಟ್. ಅದು ಹಾಗಿರಲಿ. ಈಚೆಗೆ ಆದಾಯದಲ್ಲಿ 4 ಕೋಟಿ ರೂಪಾಯಿಗಳು ಹೆಚ್ಚಿದೆ. ಖರ್ಚು 9 ಕೋಟಿ ಹೆಚ್ಚಿದೆ.

Sri K. HANUMANTHAIYA.—Most of the salaries are for doctors and teachers. Therefore, you cannot avoid payment of salaries to teachers and doctors and yet get facilities in those departments.

ಶ್ರೀ ಕೆ. ಪುಟ್ಟಸ್ವಾಮಿ.—ಆಗ ಅವರು ಏನೊಂದು ಪ್ರಶ್ನೆಹಾಕಿದರೆಂದರೆ—how far has the purchasing capacity of the common man increased ? ಇದಕ್ಕಾಗಿ ನಾನು ಶ್ರೀ ಇಮಾಂರವರಿಗೆ ಇಷ್ಟೇ ಹೇಳುತ್ತೇನೆ: ಅವರು ಮಾನ್ಯ ಹಣಕಾಸಿನ ಸಚಿವರು ಮಾಡಿರತಕ್ಕಂಥ ಭಾಷಣದ ಪ್ರತಿಯಲ್ಲಿ ಸರಿಯಾಗಿ ಕಣ್ಣುಬಿಟ್ಟು ನೋಡಿದ್ದರೆ, ಹೀಗೆ ದೇಶದಲ್ಲಿ ನಾನಾ ಬಾಬುಗಳಿಗೆ ಅಪಾರವಾಗಿ ಹಣವನ್ನೊದಗಿಸಿರುವುದರಿಂದ ಮುಂದಿನ ಸಾಲುಗಳಲ್ಲಿ ಜನರಿಗೆ ಕೊಳ್ಳುವ ಶಕ್ತಿ ಹೆಚ್ಚುತ್ತದೆ ಎಂದು ಹೇಳಿರುವುದು ಅವರಿಗೆ ಕಂಡಬರುತ್ತಿತ್ತು. ಹೀಗೆ ಮಾಡಿದ್ದರಿಂದ ದೇಶದಲ್ಲಿರತಕ್ಕ ಪ್ರತಿಯೊಬ್ಬ ಕೂಲಿಗಾರನಿಗೂ, ಪ್ರತಿಯೊಬ್ಬ ಕೈಗಾರಿಕಾ ಕ್ಷೇತ್ರದಲ್ಲಿ ದುಡಿಯುತ್ತಿರುವ ವ್ಯಕ್ತಿಗೂ ತನ್ನ ಸಂಪಾದನೆಯನ್ನು ಹೆಚ್ಚಿಸಿಕೊಳ್ಳಲು ಅವಕಾಶವಿದೆಯೆಂಬ ಅಂಶ ನಮ್ಮೆಲ್ಲರ ಕಣ್ಣಿಗೂ ಕಾಣಿಸುತ್ತದೆ. ಹೀಗಿದ್ದರೂ ಸಹ ಅವರು ಒಂದೇ ಮಾತಿನಲ್ಲಿ ಜನರಿಗೆ ಸಂಪಾದನೆ ಶಕ್ತಿ ಹೆಚ್ಚಾಗಲಿಲ್ಲ ಎಂದು ಹೇಳಿರುವುದನ್ನು ಯಾರೂ ಒಪ್ಪಲಾರರು. (ಸಭೆಯಲ್ಲಿ ಗದ್ದಲ !)

ನಾನು ಈ ಸಂಬಂಧವಾಗಿ ದೇಶದಲ್ಲಿರತಕ್ಕಂಥ ಒಬ್ಬ ಸಾಮಾನ್ಯ ವ್ಯಕ್ತಿಯನ್ನು ಸ್ವತಃ ಕೇಳಿದ್ದೇನೆ. ಆತ ಹಿಂದೆ ಇದ್ದುದಕ್ಕಿಂತ ಈಗ ಸುಖವಾಗಿದ್ದೇನೆಂದು ಹೇಳಿದನು. "ಸ್ವಾಮಿ ಮೊದಲು ರೂಪಾಯಿಗೆ 2 ಸೇರು ರಾಗಿ ಕೂಡ ಸಿಕ್ಕುತ್ತಿರಲಿಲ್ಲ. ಈ ದಿವಸ 5 ಸೇರು ರಾಗಿ ದೊರೆಯುತ್ತಿದೆ" ಎಂದು ಹೇಳಿದನು. ಹೀಗೆ ಅವರ ಜೀವನ ಎಷ್ಟು ಸುಧಾರಿಸಿದೆ ಎಂದು ಹೇಳಬಹುದು.

ಶ್ರೀ ಎ. ಭೀಮಪ್ಪನಾಯಕ್.—ದೇಶದ ಆದಾಯ ಹೆಚ್ಚಾದರೆ ಅಥವಾ ಅದು ಕಮ್ಮಿಯಾದರೆ ಜನರ ಸಂಪಾದನೆಯ ಶಕ್ತಿ ಹೇಗೆ ಹೆಚ್ಚುತ್ತದೆ ?

ಶ್ರೀ ಕೆ. ಪುಟ್ಟಸ್ವಾಮಿ.—ಅವರೇ ಹೇಳುತ್ತಿದ್ದಾರೆ. ಆದಕಾರಣ ಅವರು ಹೇಳಿದಂತೆ ದೇಶದಲ್ಲಿ ಗಾಬರಿ ಆಗತಕ್ಕಂಥ ಪರಿಸ್ಥಿತಿ ಯಾವುದೂ ಇಲ್ಲ.

ಈ ದಿವಸ ನಮ್ಮ ಸರ್ಕಾರದವರು ದೇಶಾಭಿವೃದ್ಧಿ ಕಾರ್ಯಗಳಿಗಾಗಿ ಯಥೇಷ್ಟವಾಗಿ ಹಣವನ್ನೊದಗಿಸಿದ್ದಾರೆ. ಬಡ್ಜೆಟ್ ಮೆಮೊರಾಂಡಮ್ಮಿನ ಪುಟ 7 ನ್ನು ತೆಗೆದು ನೋಡಿದರೆ ಹೋದವರ್ಷದಲ್ಲಿ 757.05 ಲಕ್ಷ ರೂಪಾಯಿಗಳನ್ನು ಒದಗಿಸಿದ್ದ ಕಡೆಗೆ ಈ ವರ್ಷ 1251.52 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಹೀಗೆಯೇ ಎಲ್ಲಾ ಅಭಿವೃದ್ಧಿಕಾರ್ಯಗಳಿಗೂ ಹೆಚ್ಚಿನ ಹಣವನ್ನೊದಗಿಸಿದ್ದಾರೆ. ದೇಶವು ಒಂದು ಪ್ರಗತಿದಾಯಕವಾದ ಮಾರ್ಗದಲ್ಲಿ ಮುಂದುವರಿಯುವ ಹಾಗೆ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅವರು ನಿಶ್ಚಯ ಮಾಡಿರುತ್ತಾರೆ. ಆದರೆ ಈ ಮಹಾ ಚುನಾವಣೆಗಳು ಹತ್ತಿರಕ್ಕೆ ಬರುತ್ತವೆ. ವಿರೋಧ ಪಕ್ಷದವರು ನಮ್ಮ ಸರ್ಕಾರವನ್ನು ಟೀಕಿಸುತ್ತಿದ್ದಾರೆ. ಜನರು ಸರ್ಕಾರ ಎಷ್ಟರಮಟ್ಟಿಗೆ ದೇಶಾಭ್ಯುದಯದ ಕಾರ್ಯಗಳನ್ನು ನಡೆಸಿದೆ ಎನ್ನುವುದನ್ನು ಪರೀಕ್ಷೆ ಮಾಡಿನೋಡುತ್ತಾ

ರೆಯೇ ವಿನಾ ಹೀಗೆ ಕೇವಲ ಈ ವಿರೋಧ ಪಕ್ಷದವರ ಮಾತಿಗೆ ಅವರಾರೂ ಮರುಳಾಗತಕ್ಕವರಲ್ಲ. ಈಗ ಅವರ ಪಕ್ಷಕ್ಕೆ ಆಂಧ್ರದಲ್ಲಿ ಏನುಗತಿ ಆಯಿತು ಎನ್ನುವುದನ್ನು ಅವರು ಚೆನ್ನಾಗಿ ಆಲೋಚನೆ ಮಾಡಿಕೊಳ್ಳಲಿ.

Sri K. HANUMANTHAIYA.—Yes, quite right.

ಶ್ರೀ ಜೆ. ಮಹಮ್ಮದ್ ಇಮಾಂ.—ಹೌದು. ಆ ಸಮಾಚಾರ ನಮಗೂ ಗೊತ್ತಿದೆ. By the co-operation of all other parties—K.L.P. K.M.P., P.S.P. ಇವರೆಲ್ಲರ ಬೆಂಬಲವಿದ್ದುದರಿಂದ ಅವರು ಬಂದರು.

ಶ್ರೀ ಕೆ. ಹನುಮಂತಯ್ಯ.—ಅವರು ಹೇಳುವ ಮಾತು ನಿಜ. ನಮ್ಮಲ್ಲಿ ನಡೆಸಿರುವ ಅಂಥ ಒಳ್ಳೆಯ ಕೆಲಸಗಳನ್ನು ನೋಡಿ, ನಾಳೆ ಅವರೆಲ್ಲರೂ ಜನರಲ್ ಎಲೆಕ್ಷನ್ ಕಾಲದಲ್ಲಿ ನಮಗೆ ಸಹಾಯ ಮಾಡುತ್ತಾರಾದ್ದರಿಂದ ನಮ್ಮ ಕಡೆಗೆ ಜಯವಾಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ಇನ್ನು ಶ್ರೀ ಕೆ. ಪಟ್ಟಾಭಿರಾಮನ್‌ರವರು ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ—ಈಗ ನಮ್ಮಲ್ಲಿರತಕ್ಕಂಥ ಸಂಬಳ ಸಾರಿಗೆಯು ಒಂದು Structure ಹೀಗೆಯೇ ಇನ್ನು ಮುಂದಕ್ಕೂ ಇರುವುದಾದರೆ ನಮ್ಮಲ್ಲಿರತಕ್ಕ ಅನೇಕ ನೌಕರರಿಗೆ ಅಸಮಾಧಾನ ಉಂಟಾಗಲು ಅವಕಾಶವಿದೆ ಯೆಂಬ ಅಂಶದ ಕಡೆಗೆ ಈ ಸಭೆಯ ಗಮನವನ್ನು ಸೆಳೆದಿದ್ದಾರೆ. ಇದರಲ್ಲಿ ಇನ್ನೂ ಒಂದು ವಿಷಯವಿದೆ. ಇನ್ನು ಯಾವ ದೇಶದ ನೌಕರರಿಗೂ ಮೈಸೂರು ದೇಶದ ನೌಕರರುಗಳಿಗೆ ಕೊಡುವಷ್ಟು ಕಡಮೆ ಸಂಬಳ ಕೊಡುವುದಿಲ್ಲವಾದರಿಂದ ನಮ್ಮ ಮೈಸೂರಿನಲ್ಲಿ ಈ ನೌಕರರು ಅತೃಪ್ತಿಗೆ ಒಂದು ಮುಖ್ಯ ಕಾರಣವಾಗಿದೆ. ಶ್ರೀ ಕೆ. ಪಟ್ಟಾಭಿರಾಮನ್‌ರವರು ಹೇಳಿದ ಹಾಗೆ ಯಾವ ಯಾವ ಸ್ಥಳದಲ್ಲಿ ವಾಸಮಾಡತಕ್ಕ ನೌಕರರಿಗೆ ಎಷ್ಟೆಷ್ಟು ಜೀವನದ ಖರ್ಚು ವೆಚ್ಚಗಳಿಗೆ ಬೇಕೋ ಅಷ್ಟಕ್ಕೆ ಸರಿಹೊಂದಿಕೊಂಡಿರುವಹಾಗೆ ಮಾಡಬೇಕಾದ್ದು ನ್ಯಾಯ. ಹಾಗೆ ಇದನ್ನು ಮಾರ್ಪಾಡು ಮಾಡದೆ ಹೋದರೆ ಇದರಿಂದ ನೌಕರರಲ್ಲಿ ಮುಂದಕ್ಕೆ ಇನ್ನೂ ಈ ಅಸಮಾಧಾನಗಳು ಹೆಚ್ಚುವುದಕ್ಕೆ ಅವಕಾಶವಾಗುತ್ತದೆ. ಈ ಮೊದಲೇ ಹೇಳಿದಹಾಗೆ ಮೈಸೂರು ದೇಶದ ನೌಕರರಿಗೆ ಕೊಡುವ ಸಂಬಳ ತೀರ ಕಡಮೆ . . .

4 P.M.

ಈ ಸಮಯದಲ್ಲಿ ಇನ್ನೊಂದು ವಿಚಾರವನ್ನು ಹೇಳಬೇಕಾಗಿದೆ. ಮೈಸೂರು ದೇಶದಲ್ಲಿರುವ ನೌಕರರೆಲ್ಲರೂ ಮೈಸೂರಿನವರು, ಅವರಿಗೆ ಇಲ್ಲಿ ಕೊಡತಕ್ಕ ಸಂಬಳವನ್ನು ಬೇರೆ ಸಂಸ್ಥಾನಗಳಲ್ಲಿ ನೌಕರರಿಗೆ ಕೊಡತಕ್ಕ ಸಂಬಳಗಳೊಡನೆ ಹೋಲಿಸಿದರೆ ಅಥವಾ ಇಂಡಿಯಾ ಸರ್ಕಾರದ ನೌಕರರಿಗೆ ಕೊಡುತ್ತಿರುವ ಸಂಬಳದೊಡನೆ ಹೋಲಿಸಿದರೆ ನಮ್ಮಲ್ಲಿ ಕೊಡುತ್ತಿರುವುದು ಬಹಳ ಕಡಿಮೆ, ಆದರೂ ಈ ದೇಶದಲ್ಲಿ ಅವರು ಜನರೊಡನೆ ಸಹಕರಿಸಿ, ಇದೊಂದು ಸೇವೆ ಎಂದು ತಿಳಿದುಕೊಂಡು ಕೆಲಸಮಾಡಿಕೊಂಡು ಬಂದಿದ್ದಾರೆ. ಈ ದೇಶ ಪ್ರಗತಿಯಾಗಿದ್ದರೆ, ಪ್ರಗತಿಪರವಾಗಿದ್ದರೆ, ಸಂಪತ್ಸಮೃದ್ಧಿಯಿಂದ ಕೂಡಿದ್ದರೆ, ಬೇರೆ ಪ್ರಾಂತ್ಯಗಳೊಡನೆ ಹೋಲಿಸಿದಲ್ಲಿ ಈ ದೇಶ ಅಭಿವೃದ್ಧಿ ಸ್ಥಿತಿಯಲ್ಲಿದ್ದರೆ, ನಮ್ಮ ದೇಶದ ನೌಕರರು ನೂರಾರು ವರ್ಷಗಳಿಂದ ಒಂದೇ ಸಮನಾಗಿ ಸರ್ಕಾರದ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿ, ಶ್ರದ್ಧೆಯಿಂದ ತಮ್ಮ ಸೇವೆಯನ್ನು ಸಲ್ಲಿಸುತ್ತ ಬರುತ್ತಿರುವುದು ಕಾರಣವಾಗಿದೆ. ಇದರಿಂದ ನಮ್ಮ ದೇಶದ ಅಭಿವೃದ್ಧಿಗೆ ಇವರು ಕಾರಣರಾಗಿದ್ದಾರೆಂಬುದನ್ನು ಮಾತ್ರ ನಾವು ಮರೆಯುವುದಕ್ಕಾಗುವುದಿಲ್ಲ. ಪ್ರಜಾಪ್ರತಿನಿಧಿಗಳಾದ ನಾವು ಅನೇಕಸಾರಿ ಕೆಲವು ಲೋಪದೋಷಗಳನ್ನು ಎತ್ತಿ ಹೇಳಬೇಕಾಗುತ್ತದೆ, ಹೇಳುತ್ತೇವೆ. ಆದರೆ ಎಲ್ಲರಲ್ಲಿಯೂ ಲೋಪವಿದೆಯೆಂದು ಹೇಳುವುದಕ್ಕಾಗುವುದಿಲ್ಲ; ಎಲ್ಲರಲ್ಲಿಯೂ ದೋಷವಿದೆಯೆಂದು ಯಾರೂ ಹೇಳುವುದಿಲ್ಲ. ನಮ್ಮ ಸರ್ಕಾರದವರು ನೌಕರರಿಗೆ ಕೊಡತಕ್ಕ ಸಂಭಾವನೆ ತೀರ ಕಡಮೆಯಾಗಿದ್ದರೂ ಕೂಡ ಉದ್ದಕ್ಕೂ ಇವರು ದೇಶಕ್ಕೆ ಸೇವೆಸಲ್ಲಿಸಿಕೊಂಡು ಬಂದಿದ್ದಾರೆ. ಹೀಗಿರುವಾಗ ಈ ನೌಕರರ ಕೋರಿಕೆಗಳನ್ನು ಸಾಧ್ಯವಾದಷ್ಟು ಸಹಾನುಭೂತಿಯಿಂದ ನೋಡಬೇಕಾದುದು ಅತ್ಯಗತ್ಯ. ಈ ದೃಷ್ಟಿಯಿಂದಲೇ ಸರ್ಕಾರದವರು ಇವರಿಗೆ ಉಚಿತ ವೈದ್ಯಸಹಾಯದ ಸೌಲಭ್ಯವನು ಕೊಟ್ಟಿದ್ದಾರೆ. ಆದರೂ ಇನ್ನೂ ಕೆಲವು ಸಹಾಯಗಳನ್ನೊದಗಿಸುವುದಕ್ಕವಕಾಶವಿದೆ. ಉದಾಹರಣೆಗೆ, ಇವರ ಮಕ್ಕಳಿಗೆ ಸ್ಕೂಲು, ಕಾಲೇಜುಗಳಲ್ಲಿ ಉಚಿತ ವಿದ್ಯಾಭ್ಯಾಸವನ್ನೊದಗಿಸಬಹುದು. ಅದರಲ್ಲಿಯೂ ಕೆಳದರ್ಜೆಯ ನೌಕರರಿಗೆ ಇಂಥ ಸೌಲಭ್ಯವನ್ನೊದಗಿಸುವುದರಿಂದ ತಪ್ಪಾಗುವುದಿಲ್ಲ. ಇದನ್ನು ಸರ್ಕಾರ ಆಲೋಚನೆ ಮಾಡಬೇಕು.

ಇನ್ನೂ ಸರ್ಕಾರದ ಕೆಲವು ಆಡಳಿತ ವಿಭಾಗಗಳ ವಿಚಾರದಲ್ಲಿ ಒಂದೆರಡಂಶಗಳನ್ನು ಹೇಳುವುದು ಅತ್ಯಗತ್ಯ. ಜಮೀನು ಕೊಡತಕ್ಕ ವಿಚಾರದಲ್ಲಿ ಶ್ರೀಮಾನ್ ಪಟ್ಟಾಭಿರಾಮನ್‌ರವರು ಪ್ರಸ್ತಾಪಮಾಡಿದರು. ಈ ಸಂಬಂಧದಲ್ಲಿ ನಾನು ಮಾನ್ಯಮಂತ್ರಿಗಳಾದ ಶ್ರೀಮಾನ್ ಮಂಜಪ್ಪನವರಿಗೆ ಒಂದು ವಿಷಯವನ್ನು ಜ್ಞಾಪಕಕ್ಕೆ ತರಬೇಕೆಂದಿಚ್ಛಿಸುತ್ತೇನೆ. ಕೆಲವು ದಿನಗಳ ಹಿಂದೆ ಈ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಟ್ಟರು. ಯಾರೋ ಒಬ್ಬರು ಬೆಂಗಳೂರಿನಲ್ಲಿರತಕ್ಕವರಿಗೆ ಅವರು political sufferer ಎಂದು ಮೈಸೂರು ಜಿಲ್ಲೆಯಲ್ಲಿ ಜಮೀನು ಕೊಟ್ಟಿದ್ದಾರೆ. ಅವರಿಗೂ ಆ ಜಮೀನಿಗೂ ಯಾವ ಸಂಬಂಧವೂ ಇಲ್ಲ. ಮೈಸೂರಿನಲ್ಲಿರುವ ಸಾವಿರಾರು ಜನರಿಗೆ ಅಲ್ಲಿ ಜಮೀನಿಲ್ಲದೆಯಿರುವಾಗ ಬೆಂಗಳೂರಿನವರಿಗೆ ಅಲ್ಲೇಕೆ ಜಮೀನು ಕೊಡಬೇಕು? ಹೀಗೆ ಅವರಿಗೆ ತಿಳಿದೋ, ತಿಳಿಯದೆಯೋ ಈ ರೀತಿ ನಡೆಯುತ್ತದೆ. ಹೀಗೆಯೇ ಜಮೀನಿರತಕ್ಕವರಿಗೆ ಜಮೀನು ಕೊಟ್ಟಿರುವ ಸಂದರ್ಭಗಳು ಅವಿರಳವೇನೂ ಅಲ್ಲ, ಎಷ್ಟೋ ಇವೆ. ಇಂಥದು ಸರ್ಕಾರದ ಗಮನಕ್ಕೆ ಬರದೇಯಿರಬಹುದು, ಅವರು ಉದ್ದೇಶಪೂರ್ವಕವಾಗಿ ಹಾಗೆ ಕೊಟ್ಟಿದ್ದಾರೆಂದು ನಾನು ಆಪಾದನೆ ಮಾಡುವುದಿಲ್ಲ. ಈ ರೀತಿ ಪ್ರಮಾದಗಳಾಗದೇಯಿರುವ ರೀತಿ ಮಾಡಬಹುದು. ಶ್ರೀಮಾನ್ ಪಟ್ಟಾಭಿರಾಮನ್‌ರವರು ಹೇಳಿದಹಾಗೆ, ಅವರಿರುವ ಸ್ಥಳದಲ್ಲೇ ಜಮೀನನ್ನು ಕೊಡಬಹುದು. ಹೀಗೆ ಮಾಡಿದರೆ ತಪ್ಪಿಲ್ಲ. ಎರಡನೆಯದಾಗಿ, ಸರ್ಕಾರಿ ಜಮೀನನ್ನು ಕೊಟ್ಟಮೇಲೆ ಉದ್ಭವವಾಗುವ ವ್ಯಾಜ್ಯಗಳನ್ನು ನೋಡಿದರೆ, ಜಮೀನನ್ನು ತೆಗೆದುಕೊಂಡವರಿಗೆ, ಅದನ್ನು ತೆಗೆದುಕೊಳ್ಳಬಾರದಾಗಿತ್ತು ಎನ್ನಿಸುವಷ್ಟು ತೊಂದರೆಯಾಗಿರುವ ನಿದರ್ಶನಗಳು ಅನೇಕವಾಗಿವೆ. ಸರ್ಕಾರದವರು ಒಂದು ನಿಖರವಾದ ನೀತಿಯನ್ನು ಹಾಕಿಕೊಂಡು, ಜಮೀನನ್ನು ಕೊಟ್ಟಮೇಲೆ ಅದರಿಂದ ಬರತಕ್ಕ ವ್ಯವಹಾರಗಳು ತಪ್ಪುವ ರೀತಿಯಲ್ಲಿ ವರ್ತಿಸಿದರೆ, ಅದರಿಂದ ಜನರಿಗೆ ಹೆಚ್ಚು ಸಹಾಯವಾಗುತ್ತದೆ. ಇಲ್ಲದಿದ್ದರೆ ಜಮೀನನ್ನು ಕೊಟ್ಟರೂ ನಿರರ್ಥಕವಾಗುತ್ತದೆ. ಹಾಗಿಲ್ಲದಿದ್ದರೆ ಅವರಿಗೆ ಜಮೀನು ಕೊಟ್ಟು, ಅವರನ್ನು ವ್ಯಾಜ್ಯಕ್ಕೆಳೆದ ಹಾಗಾಗುತ್ತದೆ.

(ಶ್ರೀ ಕೆ. ಪುಟ್ಟಸ್ವಾಮಿ).

ಮರಾಮತ್ತು ಇಲಾಖೆಯ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಇದನ್ನು ಮರಾಮತ್ತು ಇಲಾಖೆ ಎನ್ನುವುದಕ್ಕೆ ಬದಲು ಮಲಾಮತ್ತು ಇಲಾಖೆ ಎಂದು ಹೇಳಬಹುದು. ಏಕೆಂದರೆ, ಅನೇಕ ಸಾರಿ ಎರಡು ಮೂರು ವರ್ಷ ಕಾಲವಾದರೂ ಕೆಲಸ ಕಾರ್ಯಗಳು ಆಗುವುದಿಲ್ಲ. ಒಂದು ಕೆಲಸ ಮಾಡಬೇಕೆಂದು ನಿಶ್ಚಯವಾದರೆ, ಅದಕ್ಕೆ ಅಂದಾಜು ತಯಾರಾಗಿ ಬರುವುದೇ ಕಷ್ಟ, ಬಂದರೂ ಪೂರ್ಣವಾಗಿ ಅದು ಸರ್ಕಾರಕ್ಕೆ ತಲಪಿ ಕಾರ್ಯಗತವಾಗುವುದು ಇನ್ನೂ ಕಷ್ಟ. ಇದೇಕೆ ಹೀಗಾಗುತ್ತದೆಂಬುದನ್ನು ಸರ್ಕಾರದವರು ಆಲೋಚಿಸಬೇಕು. ಇಂಥ ನಿದರ್ಶನಗಳು ಎಷ್ಟೋ ಇವೆ. ಎಷ್ಟು ಶ್ರದ್ಧೆ ವಹಿಸಬೇಕೆಂದು ಸಾರ್ವಜನಿಕರು ನಿರೀಕ್ಷಿಸುತ್ತಾರೋ ಅಷ್ಟು ಅವರು ವಹಿಸಿ ಕೆಲಸ ಕಾರ್ಯಗಳನ್ನು ನಡೆಸುತ್ತಿಲ್ಲ. ಅವರ ಕೆಲಸಕಾರ್ಯಗಳಲ್ಲಿ ಎಷ್ಟು ನಿರ್ಲಕ್ಷ್ಯವಾಗಿದ್ದಾರೆಂಬುದಕ್ಕೆ ಇನ್ನೊಂದು ಉದಾಹರಣೆ ಕೊಡುತ್ತೇನೆ. ಕಳೆದ ಅಕ್ಟೋಬರ್-ನವೆಂಬರ್ ತಿಂಗಳಲ್ಲಿ ಒಂದು ನಾಲೆಯ ಕೆಳಗೆ ಸುಮಾರು ಒಂದು ಸಾವಿರ ಎಕರೆಯಲ್ಲಿ ಬೆಳೆ ಒಣಗಿ ಹೋಯಿತು. ಅಲ್ಲಿ ಸುಮಾರು 50 ವರ್ಷಗಳಿಂದ ನೀರು ಸಲೀಸಾಗಿ ಬರುತ್ತಿದ್ದರೂ ಒಂದೆರಡು ವರ್ಷಗಳಿಂದ ಆ ಇಲಾಖೆಯ ಅಲಕ್ಷ್ಯದ ಫಲವಾಗಿ ಆ ನಾಲೆಯನ್ನು ದುರಸ್ತು ಮಾಡದೇಯಿದ್ದುದರಿಂದ ಸಾವಿರಾರು ಎಕರೆ ಬೆಳೆ ಹಾಳಾಗಿ ಹೋಯಿತು. ಇನ್ನೂರು, ಮುನ್ನೂರು ಎಕರೆಗಳಲ್ಲಿ ಒಣಗಿ ಹೋಯಿತೆಂದು ಅವರೇ ಒಪ್ಪಿಕೊಂಡಿದ್ದಾರೆ. ಈ ಬಗ್ಗೆ ನನ್ನಲ್ಲಿ ದಾಖಲಾತಿ ಇದೆ. ಆದರೂ ಸರ್ಕಾರ ಹೀಗೇಕಾಯಿತೆಂಬುದನ್ನು ಇನ್ನೂ ವಿಚಾರಣೆ ಮಾಡಿಲ್ಲ. ನಾನು ಮೊನ್ನೆ ಕೂಡ ಅಲ್ಲಿಗೆ ಹೋಗಿದ್ದೆ, ಇನ್ನೂ ಕಾಮಗಾರಿ ಷುರು ಆಗಿಲ್ಲ. ಏಪ್ರಿಲ್, ಮೇ ತಿಂಗಳು ಕಳೆದರೆ ನಾಲೆಗೆ ನೀರು ಬಿಡುತ್ತಾರೆ. ಈ ಸಾರಿಯೂ ಫಸಲು ಆಗುತ್ತದೆಯೋ ಇಲ್ಲವೋ. ಇದನ್ನು ತಕ್ಷಣ ಸರ್ಕಾರ ವಿಚಾರಣೆ ಮಾಡುವುದು ಅತ್ಯಗತ್ಯ.

ಮೈಸೂರು ದೇಶದಲ್ಲಿ ವೈದ್ಯಕೀಯ ಸೌಲಭ್ಯ ಚೆನ್ನಾಗಿದೆ, ಬೇರೆ ಕಡೆಗಳಿಗಿಂತ ಇಲ್ಲಿ ಈ ಅನುಕೂಲ ಹೆಚ್ಚಾಗಿ ದೊರೆಯುತ್ತದೆ ಎಂದು ಹೇಳುತ್ತಾರೆ. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ಮತ್ತು ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಹೋಗಿ ನೋಡಿದರೆ ಈ ಸೌಲಭ್ಯ ಎಷ್ಟು ಮಟ್ಟಿಗೆ ದೊರೆಯುತ್ತಿದೆ ಎಂಬುದು ಸರ್ಕಾರಕ್ಕೆ ವಿದಿತವಾಗುತ್ತದೆ. ಮುನ್ನೂರು ಜನ ರೋಗಿಗಳಿರುವ ಕಡೆ ಆರು ನೂರು, ಏಳು ನೂರು ಜನರಿದ್ದಾರೆ. ಅಲ್ಲಿರತಕ್ಕ ಡಾಕ್ಟರುಗಳು ಮತ್ತು ಇತರ ಸಿಬ್ಬಂದಿ ಮುನ್ನೂರು ಜನರಿಗೆಂದು ನೇಮಕವಾಗಿದ್ದವರು. ಮಂಜೂರು ಮಾಡಿದ ಸಿಬ್ಬಂದಿ ಇಲ್ಲವಿದ್ದರೂ ಆರು ನೂರು ಏಳು ನೂರು ಜನ ರೋಗಿಗಳಿದ್ದಾರೆ. ಆದ ಕಾರಣ ಅಲ್ಲಿನ ರೋಗಿಗಳಿಗೆ ಸರಿಯಾದ ವೈದ್ಯಕೀಯ ಸೌಲಭ್ಯ ದೊರೆಯುತ್ತಿಲ್ಲ. ಈ ವರ್ಷದ ಬಡ್ಜೆಟ್ಟಿನಲ್ಲಿ ನೋಡಿದರೆ ಇದರಲ್ಲಿಯೂ ಅದಕ್ಕೆ ಹೆಚ್ಚಿನ ಹಣ ಒದಗಿಸಿಲ್ಲ. ಇದನ್ನು ಮಾಡುವುದು ಅತ್ಯಗತ್ಯ. ಮೈಸೂರಿನಲ್ಲಿ ಆಸ್ಪತ್ರೆಗೆ ದೂರದ ಹಳ್ಳಿಗಳಿಂದ ವೈದ್ಯ ಸಹಾಯ ಪಡೆಯಲು ಜನರು ಬರುತ್ತಾರೆ. ಇವರಿಗೆ ಸಾಕಷ್ಟು ನಿಗಾ ಕೊಡುತ್ತಿಲ್ಲವೆಂಬುದು ನನ್ನ ಅನುಭವಕ್ಕೆ ಬಂದಿದೆ. ಇದಕ್ಕೆ ಸರ್ಕಾರದವರು ಗಮನಕೊಡಬೇಕಾದುದು ಅತ್ಯಗತ್ಯ.

ವಿದ್ಯಾಭ್ಯಾಸದ ವಿಚಾರದಲ್ಲಿ ಹೇಳುವುದಾದರೆ, ಸಾವಿರಾರು ಪ್ರೈಮರಿ ಪಾಠ ಶಾಲೆಗಳು ಹಳ್ಳಿಗಳಲ್ಲಿ ಚಾವಡಿಗಳಲ್ಲಿ ನಡೆಯುತ್ತಿವೆ. ಅನೇಕ ಕಡೆ ಗ್ರಾಮಸ್ಥರು ಅಲ್ಲಿ ಪ್ರೈಮರಿ ಸ್ಕೂಲು ಕಟ್ಟಡಗಳನ್ನು ಕಟ್ಟಿಸುವುದಕ್ಕಾಗಿ ಆಸಕ್ತಿ ವಹಿಸಿ ದುಡ್ಡು ಕೊಟ್ಟಿದ್ದರೂ ಈ ಕೆಲಸ ನಡೆಯುತ್ತಿಲ್ಲ. ಈಗ ನಡೆಯುತ್ತಿರುವ ಕಾರ್ಯಚಟುವಟಿಕೆಯಿಂದ ಸಮಸ್ಯೆಗಳು ಪರಿಹಾರವಾಗುತ್ತಿಲ್ಲ. ಉದಾಹರಣೆಗೆ ಶ್ರೀರಂಗಪಟ್ಟಣದ ತಾಲ್ಲೂಕು, ಹುಲಿಕೆರೆ ಎಂಬ ಗ್ರಾಮ ಕೃಷ್ಣರಾಜಸಾಗರದ ಹತ್ತಿರವಿದೆ. ಯುನೆಸ್ಕೋ ಸೆಮಿನಾರಿಗೆ ಬಂದಿದ್ದಾಗ ಅದರ ಚೇರ್ಮನ್‌ರವರು ಆ ಗ್ರಾಮದ ಸ್ಕೂಲು ಕಟ್ಟಡಕ್ಕೆ ಅಸ್ತಿಭಾರ ಶಿಲೆಯನ್ನು ಹಾಕಿದರು. ಇದುವರೆಗೂ ಕಟ್ಟಿಲ್ಲ. ಈಚೆಗೆ ಅವರು ಒಂದು ಕಾಗದ ಬರೆದು 'ಟೈಗರ್ ಪಾಂಡ್'ನಲ್ಲಿ ನಾನು ಅಸ್ತಿಭಾರ ಶಿಲೆಯನ್ನು ಹಾಕಿದ ಸ್ಕೂಲನ್ನು ಕಟ್ಟಿ ಆಯಿತೆ' ಎಂದು ಬರೆದಿದ್ದಾರೆ. ಹುಲಿಕೆರೆಯನ್ನು 'ಟೈಗರ್-ಪಾಂಡ್' ಎಂದು ತರ್ಜುಮೆ ಮಾಡಿದ್ದಾರೆ (ನಗು!) ಐದು ವರ್ಷಗಳಿಂದ ಆ ಕಟ್ಟಡವನ್ನು ಕಟ್ಟಿಲ್ಲ. ಕೆಲಸಗಳು ನಡೆಯುತ್ತವೆ, ಇಲ್ಲವೆಂದು ಹೇಳುವುದಿಲ್ಲ. ಆದರೆ ಎಲ್ಲಿ ಗ್ರಾಮದ ಜನರು ಬಂದು ಆ ಕಾಗದದ ಹಿಂದೆಯೇ ಹೋಗಿ ಕೆಲಸ ಮಾಡಿಸಲು ಸಾಧ್ಯವಿಲ್ಲವೋ ಅಲ್ಲಿ ಕೆಲಸವಾಗುತ್ತಿಲ್ಲ. ಇಂಥಾದ್ದು ಒಂದಲ್ಲ, ಎರಡಲ್ಲ, ಹತ್ತಾರು ನಿದರ್ಶನಗಳನ್ನು ಕೊಡಬಲ್ಲೆ. ಹತ್ತಾರು ವರ್ಷಗಳಾದರೂ ಕೆಲಸಗಳು ನಡೆಯುತ್ತಿಲ್ಲ. ಯುನೆಸ್ಕೋ ಎನ್ನುವುದು ಒಂದು ಅಂತರ ರಾಷ್ಟ್ರೀಯ ಸಂಸ್ಥೆ. ಇದರ ಅಧ್ಯಕ್ಷರು ಅಸ್ತಿಭಾರ ಶಿಲೆ ಹಾಕಿ ಐದು ವರ್ಷವಾದರೂ ಆ ಕೆಲಸ ಆಗಿಲ್ಲವೆಂದರೆ, ನಾವು ಎಷ್ಟು ತರೆತಗ್ಗಿಸುವ ವಿಚಾರ ಇದು ಎಂಬುದನ್ನು ಹೇಳಿ ಇಲ್ಲಿಗೇ ಬಿಡುತ್ತೇನೆ. ಒಂದೇ ತಾಲ್ಲೂಕಿನಲ್ಲಿ ಹತ್ತಾರು ಕೆಲಸಗಳು ನಿಧಾನವಾಗಿರುವುದನ್ನು ಹೇಳಬಲ್ಲೆ. ಸ್ಕೂಲುಗಳಿಗೆ ಕಟ್ಟಡಗಳನ್ನೊದಗಿಸುವ ಸಂಬಂಧದಲ್ಲಿ ಮರ, ಮುಟ್ಟುಗಳನ್ನೊದಗಿಸಬೇಕಾದುದು ತೀರ ಕನಿಷ್ಠ ಕರ್ತವ್ಯ, ಇದನ್ನು ಮಾಡುವುದು ಅಗತ್ಯ, ಇದಕ್ಕೆ ಗಮನ ಕೊಡಬೇಕೆಂದು ಸೂಚಿಸುತ್ತೇನೆ.

ಇನ್ನೊಂದು ವಿಚಾರ. ನಾವು ಅನೇಕ ಸಾರಿ ಸಭೆಯಲ್ಲಿ ಪ್ರಶ್ನೆಗಳನ್ನು ಹಾಕುತ್ತೇವೆ, ಸರ್ಕಾರದವರು ಉತ್ತರಗಳನ್ನು ಕೊಡುತ್ತಾರೆ. ಹೀಗೆ ಕೊಟ್ಟ ಮೇಲೆ ಆ ಉತ್ತರಗಳಿಂದ ಉದ್ಭವವಾಗುವ ಸಮಾಚಾರಗಳಿಗೆ ಸರ್ಕಾರದವರು ಗಮನಕೊಟ್ಟರೋ, ಇಲ್ಲವೋ ಎಂಬುದು ಗೊತ್ತಾಗುವುದಿಲ್ಲ. ಎಷ್ಟೇ ಪ್ರಶ್ನೆಗಳನ್ನು ಹಾಕಿದರೂ ಸಂಬಂಧಿಸಿದ ಕೆಲಸಗಳು ಕೂತಲ್ಲೇ ಕೂತಿರುತ್ತವೆ. ನಾವು ಹೇಳಿದ ಅಂಶಗಳನ್ನು ಪರಿಶೀಲನೆ ಮಾಡಲು ಸರ್ಕಾರದವರು ಗಮನಕ್ಕೆ ತೆಗೆದುಕೊಂಡರೋ, ಇಲ್ಲವೋ ಎಂಬ ಅನುಮಾನ ಬರುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ಇದಕ್ಕೇ ಬೇರೆ ಒಂದು ವಿಧಾನವನ್ನನುಸರಿಸುತ್ತಿದ್ದಾರೆ, ಸರ್ಕಾರದವರು ಶಾಸನ ಸಭೆಗಳಲ್ಲಿ, ಸರ್ಕಾರದವರು ಯಾವುದಾದರೂ ಭರವಸೆ ಕೊಟ್ಟರೆ, ಅದು ಏನಾಯಿತು, ಅದರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದೆ ಎಂಬುದನ್ನೆಲ್ಲಾ ನಮೂದಿಸಿ ಒಂದು ಪುಸ್ತಕವನ್ನು ಮುದ್ರಣ ಮಾಡಿಸಿ ಸದಸ್ಯರಿಗೆ ಹಂಚುತ್ತೇವೆ.

ಶ್ರೀ ಕೆ. ಪುಟ್ಟಸ್ವಾಮಿ.—ಈ ಸಂದರ್ಭದಲ್ಲಿ ನಾನು ಒಂದು ಮಾತು ಹೇಳುತ್ತೇನೆ. ಅಧಿವೇಶನ ನಡೆಯುತ್ತಿರುವ ವೇಳೆಯಲ್ಲಿ, ಸಭೆಯಲ್ಲಿ ಮಂತ್ರಿಗಳಿಲ್ಲವೆಂದು ಅನೇಕ ಸಾರಿ ನಾವು ಅಧ್ಯಕ್ಷರ ಗಮನಕ್ಕೆ ತರುತ್ತೇವೆ. ಆಗ ಯಾರಾದರೂ ಒಬ್ಬರು ಮಂತ್ರಿಗಳಿದ್ದರೆ ಸಾಕೆಂದು ಹೇಳುತ್ತಾರೆ. ಯಾರಾದರೊಬ್ಬರಿದ್ದರೆ ಸಾಲದು. ಸಂಬಂಧಪಟ್ಟ ಇಲಾಖೆಯ ಮಂತ್ರಿಗಳೇ

ಲ್ಲರೂ ಇರಬೇಕು. ಅನೇಕ ಸಂದರ್ಭಗಳಲ್ಲಿ ಆಯಾ ಮಂತ್ರಿಗೆ ಸಂಬಂಧಪಟ್ಟ ಇಲಾಖೆಗಳ ವಿಚಾರದಲ್ಲಿಯೂ ಹೇಳುವ ವಿಚಾರಗಳಿರುತ್ತವೆ. ಇದನ್ನು ಅವರು ಸಭೆಯಲ್ಲಿದ್ದು ತಿಳಿದುಕೊಂಡು ಏನು ಉತ್ತರ ಹೇಳಬೇಕೋ ಅದನ್ನು ಹೇಳಿ, ಆ ಕೆಲಸವನ್ನು ಮಾಡಿದರೆ ಆಗುತ್ತದೆಯೇ ವಿನಾ ಇಲ್ಲದಿದ್ದರೆ ಸಾಧ್ಯವಿಲ್ಲ. ಅನೇಕ ಸಾರಿ ನಾವು ಏನನ್ನಾದರೂ ಹೇಳುತ್ತೇವೆ; ಆಗ ಒಬ್ಬರೋ, ಇಬ್ಬರೋ ಇರುತ್ತಾರೆ. ಅದರಿಂದ ಆ ಕೆಲಸ ನಡೆಯುತ್ತದೆಯೋ, ಇಲ್ಲವೋ, ಎಂಬ ಅನುಮಾನ ಬರುತ್ತದೆ. ಆದಕಾರಣ ಸಭೆಯಲ್ಲಿ ಚರ್ಚೆ ಆಗುವಾಗ, ಸದಸ್ಯರ ಅಭಿಪ್ರಾಯಕ್ಕೆ ಸರ್ಕಾರ ಹೆಚ್ಚು ಗಮನ ಕೊಡಬೇಕು. ಇಲ್ಲದಿದ್ದರೆ ಸಾರ್ವಜನಿಕಾಭಿಪ್ರಾಯಕ್ಕೆ ಮನ್ನಣೆ ಸಾಕಷ್ಟು ಕೊಟ್ಟಹಾಗಾಗುವುದಿಲ್ಲವೆಂದು ಸರ್ಕಾರಕ್ಕೆ ಸೂಚಿಸುತ್ತೇನೆ.

Sri A. BHEEMAPPA NAIK.—Does the Hon'ble Member know that there are two Houses to sit together at the same time?

Sri H. SIDDAVEERAPPA (Minister for Home and Industries).—Further, Sir, Government have made arrangements to take copies of all those speeches delivered by Hon'ble Member and note every point that has been raised concerning each Ministry, so that not a single point will be missed.

ಶ್ರೀ ಕೆ. ಷಟ್ಟಸ್ವಾಮಿ.—ಹಾಗೆಂತೂ ಇದ್ದರೆ ಬಹಳ ಸಂತೋಷ.

ಸ್ವಾಮಿ, ಒಂದು ವಿಚಾರ ಹೇಳುತ್ತೇನೆ. ಮೊನ್ನೆ ಮತ್ತು ಈ ಸಭೆಯ ಕಾರ್ಯಕಲಾಪಗಳ ಪಟ್ಟಿಯನ್ನು ಮೊದಲು ಹಾಕಿದಾಗ ಅದರಲ್ಲಿ, Constitution Third Amendment Bill ಚರ್ಚೆ ಮಾಡುವುದಕ್ಕೆ ಒಂದು ಕಾಲ ನಿಗದಿ ಮಾಡಿದ್ದರು. ಆದರೆ ಮೊನ್ನೆ ಯಲ್ಲಿ ಈ ವಿಷಯ ಚರ್ಚೆಯಾಗಿ, ಆ ಮಸೂದೆಯನ್ನು ಚರ್ಚೆ ಮಾಡುವುದು ನಿರರ್ಥಕ, ಆಗಲೇ ಅದಕ್ಕೆ ರಾಷ್ಟ್ರಾಧ್ಯಕ್ಷರು ಅಂಗೀಕಾರ ಕೊಟ್ಟಿದ್ದಾರೆ ಎಂಬ ಅಭಿಪ್ರಾಯ ಬಂತು. ತಿದ್ದುಪಡಿಯಾದ ಕಾರ್ಯಕ್ರಮದ ಪಟ್ಟಿಯಲ್ಲಿ ಆ ಚರ್ಚೆಗೆ ಗೊತ್ತಾಗಿದ್ದ ಕಾಲದಲ್ಲಿ ಬೇರೆ ಕಾರ್ಯಕ್ರಮ ಇರುವುದು ಎಲ್ಲರಿಗೂ ಗೊತ್ತಿದೆ. ಶಾಸನ ಸಭೆಗಳ ವಿಚಾರದಲ್ಲಿ ಸರ್ಕಾರಕ್ಕೆ ಹೆಚ್ಚು ಗಮನವಿದ್ದಿದ್ದರೆ, ವಿಧಾನ ಸಭೆಯನ್ನು ಕರೆದು ರಾಜ್ಯಾಂಗ ತಿದ್ದುಪಡಿಯನ್ನು ಇಡುತ್ತಿರಲಿಲ್ಲವೆ? ನಮ್ಮ ಅಭಿಪ್ರಾಯವನ್ನು ಕೇಳುತ್ತಿರಲಿಲ್ಲವೇ?

ಇಂಡಿಯಾ ದೇಶದ ರಾಜ್ಯಾಂಗ ಶಾಸನದ ಮೂಲಕ ನಮಗೆ ಕೊಟ್ಟಿರತಕ್ಕಂಥ ಅವಕಾಶವನ್ನು ತಾವು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿರಲಿಲ್ಲವೇ? ಇದನ್ನು ಮಾಡಬೇಕಾಗಿದ್ದಿತು. ಆದರೆ ಈಗ ಕಾನೂನು ಆಗಿಯೇಹೋಗಿದೆ, ಆದ್ದರಿಂದ ಈಗ ನಾವು ಚರ್ಚಿಸುವುದರಿಂದ ಪ್ರಯೋಜನವಿಲ್ಲವೆಂದು ಹೇಳಬಹುದು. ಆದರೆ ಇಂತಹ ಲೋಪ ತಮ್ಮಿಂದ ಆಗಬಾರದು. ತಾವು ಮಾತ್ರವಲ್ಲ, ತಮ್ಮಿಂದ ಮುಂದೆ ಬರತಕ್ಕಂಥ ತಮ್ಮ successor ಗಳಿಂದ ಕೂಡ ಇಂತಹ ಪ್ರಮಾದವಾಗಕೂಡದು. ಅದಕ್ಕೆ ತಾವು ಸರಿಯಾದ ಎಚ್ಚರಿಕೆಯನ್ನು ಕೊಡಬೇಕು. ಸರಕಾರದ ಯಂತ್ರ ಸರಿಯಾಗಿದ್ದಿದ್ದರೆ ಇಂತಹ ತಪ್ಪು ಆಗುತ್ತಿರಲಿಲ್ಲ. ಆದ್ದರಿಂದ ಇದಕ್ಕೆ ಸರಕಾರದ ಗಮನವನ್ನು ಎಳೆಯಬೇಕಾದದ್ದು ಅವರ ಕರ್ತವ್ಯವಾಗಿತ್ತು. ಇದರ ಪ್ರಾಮುಖ್ಯತೆ ಏನಿದೆ ಎಂಬುದನ್ನು ಅವರು ತಮಗೆ ಅರಿವು ಮಾಡಿಕೊಟ್ಟಿಲ್ಲ ಎಂದು ಭಾವನೆಯಾಗುತ್ತದೆ. ಇನ್ನೊಂದು ಮುಖ್ಯ ವಿಚಾರವನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ನಾನು ನಮ್ಮ ಸಭೆಮುಂದೆ ಇಟ್ಟಿರತಕ್ಕಂಥ ಬಡ್ಜೆಟ್ಟನ್ನು ಸಂಪೂರ್ಣವಾಗಿ ಸ್ವಾಗತಿಸುವುದೂ ಅಲ್ಲದೆ ಸಂಪೂರ್ಣವಾಗಿ ಬೆಂಬಲವನ್ನೂ ಕೊಡುತ್ತೇನೆ. ಇಲ್ಲಿ ಅನೇಕ ಪ್ರಗತಿಪರವಾದ ಅಂಶಗಳನ್ನು ತಾವು ಕೊಟ್ಟಿದ್ದೀರಿ. ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೆ ಯಥೇಚ್ಛವಾಗಿ ಹಣವನ್ನು ಒದಗಿಸಿದ್ದೀರಿ. ಮೈಸೂರು ದೇಶದಲ್ಲಿ ಆ ಕಾರ್ಯವನ್ನೆಲ್ಲಾ ಸಾಧಿಸುವ ಯಂತ್ರವೂ ಇದೆ. ಸರ್ಕಾರಕ್ಕೆ ಆ ಶಕ್ತಿಯನ್ನೂ ಕೂಡ ದೇವರು ಕೊಡಲೆಂದು ಹಾರೈಸುತ್ತೇನೆ. ಈ ಕೆಲಸ ಮಾಡಿದರೆ ಮುಂದಿನ ಪೀಳಿಗೆಯವರಿಗೆ ಬಹಳ ಉಪಕಾರ ಮಾಡಿದಂತಾಗುತ್ತದೆ. ಇನ್ನೂ ಒಂದು ವಿಚಾರ ತಮ್ಮ ಗಮನಕ್ಕೆ ಬಂದಿಲ್ಲ. ಅದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೈಸೂರು ದೇಶದಲ್ಲಿ, ಅದರಲ್ಲೂ ಮೈಸೂರು, ಬೆಂಗಳೂರು ಪಟ್ಟಣಗಳಲ್ಲಿ ಹಾಲಿನ ಸಮಸ್ಯೆ ಬಹಳ ಕಠಿಣವಾದುದು, ಸರಿಯಾದ ಹಾಲು ಒದಗುತ್ತಾ ಇಲ್ಲ. ಅದರ ಬೆಲೆ ಸಹ ದುಬಾರಿ. ಅದಕ್ಕೆ ತಾವು ಒಂದು ವ್ಯವಸ್ಥಿತವಾದಂಥ ಹಾಲಿನ ಕೇಂದ್ರವನ್ನು ಮಾಡಿ ಹಾಲು ಸರಬರಾಜು ಮಾಡುವುದಕ್ಕೆ ವ್ಯವಸ್ಥೆಮಾಡಬೇಕಾದುದು ಮತ್ತು ಅದಕ್ಕೆ ಹಣ ಒದಗಿಸಬೇಕಾದುದು ಅತ್ಯಗತ್ಯವಾಗಿದೆ. ಇದ್ದ ಒಂದು Dairy Farm ಕೂಡ ಕೇಂದ್ರ ಸರ್ಕಾರದವರು ಮುಚ್ಚಿಬಿಟ್ಟರು ಎಂದು ಪತ್ರಿಕೆಯಲ್ಲಿ ನೋಡಿದ್ದೇನೆ. ಇನ್ನು ನಮ್ಮ ಸಂಸ್ಥಾನದ ಸರಕಾರದವರು ಮೈಸೂರಿನ ಹತ್ತಿರ ಮತ್ತು ಬೆಂಗಳೂರಿನ ಹತ್ತಿರ ಬೊಂಬಾಯಿನಲ್ಲಿರುವ Milk colony ಹಾಗೆ ವ್ಯವಸ್ಥೆಮಾಡಿ, ಇಲ್ಲಿರತಕ್ಕ ಹಾಲಿನ ಸಮಸ್ಯೆಯನ್ನು ನಿವಾರಣೆಮಾಡಿ ಮಕ್ಕಳಿಗೆ ಒಳ್ಳೆ ಹಾಲು ಸಿಕ್ಕುವುದಕ್ಕೆ ವ್ಯವಸ್ಥೆಮಾಡುವುದು ಅತ್ಯಗತ್ಯ. ಅದಕ್ಕೆ ತಾವು ಗಮನ ಕೊಡಬೇಕೆಂದು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಸರಕಾರದವರು ಈ ವರ್ಷ ಬಹುಮುಖ್ಯವಾದ ಒಂದು ಬಾಬಿಗೆ ಹಣವನ್ನು ಇಟ್ಟಿದ್ದಾರೆ. ಅದಕ್ಕೆ ನಾನು ಸರಕಾರದವರನ್ನು ತುಂಬ ವಂದಿಸಬೇಕಾಗಿದೆ. ಕಾಲೇಜು, ಸ್ಕೂಲುಗಳಿರತಕ್ಕಂಥ ಕಡೆ ಆದರಲ್ಲೂ ಡಿಸ್ಟ್ರಿಕ್ಟ್ ಹೆಡ ಕ್ವಾರ್ಟರ್ಸ್‌ಗಳಲ್ಲಿ ಕಾಲೇಜುಗಳು ಇರುವುದರಿಂದ ಹೆಚ್ಚು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ವಿದ್ಯಾಭ್ಯಾಸಮಾಡುತ್ತಾ ಇರುವುದರಿಂದ ಅಲ್ಲಿ ಅವರಿಗೆ ಸರಿಯಾದ ವಸತಿ ಇಲ್ಲದೇ ಇರುವುದನ್ನು ಮನಗಂಡು ಅದಕ್ಕೆ ಸರಕಾರದವರು ವಿಶೇಷವಾಗಿ ಹಣವನ್ನು ಮೀಸಲಾಗಿಟ್ಟಿರುವುದು ಬಹಳ ಪ್ರಶಂಸನೀಯ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಸೂಚಿಸುತ್ತೇನೆ. ಇದುವರೆಗೂ ಕೂಡಾ ಯಾರಾದರೂ ಉದಾರಿಗಳು, ದಾನಿಗಳು ಒಂದು ಕಟ್ಟಡಗಳನ್ನು ಕಟ್ಟಿಸುವುದಾದರೆ ಶೇಕಡ 50 ರಷ್ಟು ಹಣ ಕೊಡುತ್ತಿದ್ದಿರಿ. ಉದಾರಿಗಳು ಸಾಧಾರಣವಾಗಿ ಜನರಲ್ ಹಾಸ್ಟಲುಗಳನ್ನು ಕಟ್ಟಿಸುವುದಿಲ್ಲ. ಅನೇಕ ಪಂಗಡಗಳು ತಮ್ಮ ತಮ್ಮ ಪಂಗಡಗಳಿಗೆ ಮೀಸಲಾಗಿಡುವಂತಹ ಹಾಸ್ಟಲುಗಳನ್ನು ಕಟ್ಟಿಸುತ್ತಿದ್ದರು. ಸಾರ್ವಜನಿಕ ಹಾಸಲುಗಳನ್ನು ಕಟ್ಟಿಸಿದರೆ, ಅಂದರೆ ಎಲ್ಲರಿಗೂ ಅವಕಾಶವಿರುವ ಹಾಸ್ಟಲುಗಳನ್ನು ಕಟ್ಟಿಸಿದರೆ ಅವರಿಗೆ ತಾವು ಹೆಚ್ಚಿನ ರೀತಿಯಲ್ಲಿ ಸಹಾಯ ದ್ರವ್ಯವನ್ನು ಒದಗಿಸಿ ಕೊಡುವುದರ ಮೂಲಕ ಉತ್ತೇಜನ ಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿ ಈ 1955-56 ನೇ

(ಶ್ರೀ ಕೆ. ಪುಟ್ಟಸ್ವಾಮಿ.)

ಸಾಲಿನ Budget ಆಯವ್ಯಯದ ಸಲಹೆಗಳನ್ನೆಲ್ಲಾ ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

Sri V. M. MASCARENHAS (St. John's Hill).— Mr. Speaker, in spite of a deficit budget, it is consoling to find that the Finance Minister has not burdened us with any heavy taxation. The State to augment its revenues has three ways before it. One is taxation; the second is curtailment of expenditure and the third is tapping of new sources of revenue. Under taxation, I am afraid, we have lost to a considerable extent our right to tax. We have lost control over income tax and excise duties; the railway revenues are no longer with us and barring sales-tax which has its own limitations, it is perhaps futile for us to say that we are a body empowered with the right to tax. Therefore, our limitations in taxing people being so limited, I do not know how the Government will think of covering this big gap of Rs. 4 crores, the budget deficit of this year. Now, the second and perhaps the more practical one is to curtail our expenditure to the barest minimum. I am convinced, Sir, that—according to the old adage, a penny saved is a pound gained,—if only our Ministers could resolve to avoid all unnecessary expenditure without sacrificing efficiency, and if our Departmental Heads take care to see that every rupee we allot them here is made to go as far as it can, then our budget figures would perhaps not be so dismal. The Finance Minister unfortunately is not here. As Sri Imam has already said, the Finance Minister in 1952 did give real hopes to the House that the Government would take every possible care to see that unnecessary expenditure would be avoided. The Finance Minister made a good beginning but unfortunately I must say in 1955 our hopes have been belied. We have today 12 Secretaries to Government, 29 Departmental Heads and there is no knowing whether this number will stop here. The answer given generally is that the work has increased. I would say, the mistake is not with the increase of work. The mistake is with the system; what was once handled by the Departmental Heads has now come to the Secretariat level with the result that there is burden on the Ministers and Secretaries.

Now, coming to concrete facts, the other day in answering an interpellation, the Minister for Electricity told us how the expenditure in the Electrical Department has gone up during the last seven years. In the year 1947 we spent Rs. 44 lakhs on the Electrical Department; in 1950-51, this was doubled, namely Rs. 87 lakhs; in 1953-54 it is Rs. 146 lakhs, *i.e.*, double the previous figure. I see now from the Budget figures, this year's allotment is Rs. 170 lakhs. Sir, I am beginning really to feel that there is something wrong with that Department, at least, so far as the spending is concerned.

Sri Kadidal MANJAPPA.—But what is the length of line and the amount of service?

Sri V. M. MASCARENHAS.—It has nothing to do with this rise in expenditure. The Government must realise that the Electricity Department does not need any raw material like any other industry. Raw material is there in the shape of heavy machinery on which the Government have spent crores of rupees.

Sri Kadidal MANJAPPA.—What about supervision?

Sri V. M. MASCARENHAS.—I am prepared to grant that a certain amount of expenditure, over staff is needed when Mahatma Gandhi Electric Scheme has come into full swing. All the same, is he prepared to admit that he wants three and half times the expenditure incurred in 1947 to run the Electrical Department? I would strongly urge upon the Government, Sir, that a Committee be appointed forthwith to look into the question and see what is wrong with a specific direction that it should report to this House before the year is out. In my opinion, the net revenue of Rs. 70 lakhs from hydel schemes on which we have spent colossal sums to the tune of Rs. 2,600 lakhs is disappointing. That is about the Electricity Department.

About the Public Works Department, it is a story by itself. Every year, so far as I have seen for the last four

years, member after member has been saying that this Department needs re-organisation. But thank God, the Revenue Minister is so calm and unruffled. By temperament he is such, I think. He seems to say that legislators may come, legislators may go, but the Public Works Department will go on in the same old way. It is a Department that spends Rs. 7 crores of good money; nobody knows how it is spent, whether it is wisely spent or whether every rupee that is spent brings a corresponding return. After these two Departments, there is another one, *i.e.*, Rural Industrialisation Scheme.

Sri H. SIDDAVEERAPPA.—Very small amount.

Sri V. M. MASCARENHAS.—May be. But at least in these two Departments you could assess the results for the money spent. But in this Department the assessment comes in the shape of a few bulletins that so many extra eggs have been laid,—our fowls have been laying all along,—so manyextra bricks have been burnt, so many other things have been done. But how this will contribute to the national wealth of the country and how the income of the village or unit has been increased has not been told, nor is there an agency to assess it. Over and above this, I am told that this Department's favourite story is not even to submit vouchers for the money they have spent. So, I feel that, if the Government mean to save more money in spite of the deficit budget, they should take greater care and devise a system whereby monthly check on the expenditure of every one of the Departments could be had by the Ministers and a report on them submitted to this House whenever it meets. Some such system must be devised.

With these remarks, I would go on to the First Five-Year Plan, a plan on which we have spent large sums of money. The Finance Minister while speaking on the First Five-Year Plan said that the emphasis of the First Five-Year Plan was on agriculture, irrigation and power. This is, as it should be. After the partition and as a result of series of unfavourable seasonal conditions, acute shortage of food in the country was felt after the year 1949 with the result that the whole country under the Prime Minister's clarion call 'produce or perish' made an all-out effort resulting in what we may call Grow More Food Campaign. . . .

Sri Kadidal MANJAPPA.—Again Public Works Department!

Sri V. M. MASCARENHAS.—The results of all our efforts in this direction are too well known to the country. From what was a very acute shortage in food in the year 1950, today we have become not only self-sufficient but we are in a position to send out surplus foodgrains.

ಶ್ರೀ ಜೆ. ಮಹಮದ್ ಇಮಾಂ.—ದೇವರು ಮಳೆ ಕೊಟ್ಟ ಹಾಗೆ ಬೆಳೆಯಾಯಿತು.

Sri V. M. MASCARENHAS.—This was achieved by a number of methods—better seeds and more manure, minor irrigation works, desilting of tanks, irrigation dams. I must congratulate the Governments all over the country that within a period of four years they obtained such good results of which Sri Imam was rather doubtful in the year 1952. At the same time what was happening? Major projects were also launched. If the Hon'ble Members will bear with me, I will read out a few major irrigation schemes:

4-30 P.M.

Bhakra irrigation to irrigate an acreage of 36 lakhs, Damodar Valley 10 lakhs of acres, Hirakud 18 lakhs, Kosi 26 thousand acres; Chambal 12 lakhs, Nandikonda 22 lakhs, Lower Bhavani 22 lakhs, Mahi ·7 lakh. Godavari ·11 lakh; Gattaprabha 2·2. lakhs, Tunga 25,000 and Nugu 25,000. All these schemes were launched after 1940. At the end when these are completed, it is said that 140 lakhs of acres will be brought under irrigation, which when converted in terms of paddy would mean, a minimum yield of 1,400 lakhs of pallas of paddy in the country. This would be ordinarily good news. The Finance Minister has also said at the latter part of his speech that there is another side to this story. In

(SRI V. M. MASCARENHAS.)

November last, Sri Punjabrao Deshmukh, speaking at Calcutta on the food situation in the country said that the country has practically reached self-sufficiency in foodgrains; and in the field of rice, there was not only self sufficiency but there was a possibility of exporting one or two lakhs tons of rice. Along with this in December last at the F.A.O. Conference at Rangoon, representatives of all the South-East Asian countries met and they expressed grave concern at the large accumulation of rice stock in those countries and it was felt that unless an outlet was made for this surplus stock, those countries would be economically very badly hit. What had happened during the war? The reason was, as a result of the war and as a result of difficulty to procure rice freely from other countries, countries which were habitually importers of rice had either changed over to some grain for their consumption or had tried to become self-sufficient themselves, with the result, today, Burma, Thailand and Indonesia are knocking at others' doors begging them to take their surplus rice. Let us not forget the fact that rice is being eaten only in Asia and nowhere else. I would like to ask Hon'ble Members to visualise a picture in this country five or ten years hence, when our 140 lakhs of acres are irrigated in 1966, what is the picture from the standpoint of foodgrains? (*A Member*: We will expect to have it.) If you are self-sufficinet in the year 1955 with what you have produced, what is going to happen to these 1,400 lakhs of acres which will be irrigated in 1966 or a little later? Well, there is a cry in the country that agricultural prices have come down and even the Central Government has taken note of this and has tried to see how best they could stabilise the prices. Now I would like to ask the members, is it not but right that Government who thought it best to introduce controls and to fix ceiling prices and undertake distribution of food grains, to save the non-producing public at a time of exigency, should be equally solicitous to look to the agriculturist and to his needs when prices come down? After all India is an agricultural country and the happiness and prosperity of the country lies in a happy, prosperous and contented farmer who is an asset to the Nation. Well, Sir, dams are majestic things, they are very nice to look at, they evoke our admiration when we look at them. But unfortunately, they cost vast sums of money. It would be all right if this money was lying idle in the treasury, but when it is realised that today for every development work we have to borrow money at a fairly high rate of interest, I would like to ask Hon'ble Members where we stand and where we hope to stop. We have got to spend another 17 crores of rupees on the existing dams. I am told that there are one or two big irrigation works that the Government contemplate to undertake. Where is the money to come from? If you are sure that everyone of them gives a 4 per cent return, just barely the interest which you have to pay to the person from whom you have borrowed the money, then you can do it. Otherwise stop all new dams. I simply cannot understand the rush for building dams. On the other hand, I would suggest that emphasis should be on other methods which have been successfully tried and which have given good result. Let us attempt to grow two blades of grass where there is one. Let us improve our agriculture by improved scientific methods by the larger use of manures and fertilisers, by restoring tanks, by irrigation pumps and other methods which do not involve large capital costs. If we could, within four years of our existence, make this country from acute shortage into a surplus one in foodgrains without building a single new dam, what prevents you from doing the same in the years to come?

SRI A. BHEEMAPPA NAIK.—Do you want to damn the previous schemes?

SRI V. M. MASCARENHAS.—I want the dams but not the construction of new dams. With the existing dams we can stop. I am only against the new dams.

Sri H. SIDDAVEERAPPA.—I will intervene for one minute. I would request the Hon'ble friend to see the report issued by the Department of Agriculture under Grow More Food. It has been clearly shown there that in spite of this extra production, the production of food does not keep pace with the increase of population in this State.

Sri V. M. MASCARENHAS.—You please refer to the circular that the Government of India has given. Sri Punjabrao Deshmukh is a better authority to speak on the point of agriculture. He has stated categorically in the Parliament, when somebody questioned him as to the wisdom in exporting two lakhs tons of rice when the population was gradually increasing, that the growth of population is not proportionate to this increase of production of foodgrains. Well, we are in a position to export two lakhs tons this year. Hon'ble Members may be aware that under an agreement with Burma, the Government of India have purchased rice to the tune of 30 lakh tons of rice. That point we should not forget. What I am saying is this: I am only requesting the Members to visualise a picture in the year 1960 or a little later when these dams which have already been mentioned, reach the stage of completion and with what results? (*Interruption.*) You will have to export your extra foodgrains. You will be at the mercy of the foreigner who will exploit us. They will slump the market and bring down the rates.

Now, I come to the Second Five-Year Plan. Here it is a little more interesting. (*Interruption.*) Let us be content with the existing dams and no more dams for sometime to come. Dams are not helpful to the people in the South.

An HON'BLE MEMEER.—You don't want your own people to have water facilities?

Sri V. M. MASCARENHAS.—I would like to tell the Hon'ble friend that in Mysore we have Tungabhadra, Nugu, Krishnarajasagara dams, Bhadra dam. I mean we will have a total acreage of three lakhs in addition to what we have today. Is that not enough?

An HON'BLE MEMBER.—We have a crore of people, do you know my friend?

Sri V. M. MASCARENHAS.—I do not like this interruption, Sir.

Sri D. DEVARAJ URS.—Construction of dams and improvement of tanks and irrigation channels all these are undertaken. I would like my friend Mr Mascarenhas to realise that the cultivated area under irrigation has not considerably improved.

Mr. SPEAKER.—You can reply him afterwards.

Sri D. DEVARAJ URS.—If that point is understood, the line of argument which he is taking perhaps...

Mr. SPEAKER.—You close that chapter.

Sri V. M. MASCARENHAS.—He forgets that I am dealing with the Second Five-Year Plan now. Well, I will just read the speech of the Finance Minister as it stands: "Several new industries have to be started and, the existing industries have to be improved and expanded" And another sentence: "Private Sectors deserve every encouragement" Sir, when I read this speech for the first time, I was reminded of Crossword puzzles which says that Rs. 50,000 must be won. But unfortunately it is not stated how is this is to be done. As I pointed out last year in my budget speech, let us not forget that India is not an undeveloped country. Our industrial development has been there for the last 50 years. In the irrigation sector we had nothing; we began with a scrap. If we simply resolve one fine morning to spend hundred crores, there will not be the desired results of hundred crores.

As you know, textile industry is not only self-sufficient but it is becoming the exporter to countries who can take 20 per cent of its production. In cement we are almost self-sufficient. The other industries like iron and steel, sugar and paper, have already attracted the attention of the Central Government for expansion before 1960. With this new picture in the field of industries, what does our Government,

(SRI V. M. MASCARENHAS.)

mean by saying that during the next five years, we shall spend hundred crores. Have they got the Blue Print ready ?

SRI H. SIDDAVEERAPPA.—This is under preparation.

SRI V. M. MASCARENHAS.—Have they found out what industries to start, what the marketing facilities are and what will be the demand for the goods that they produce ? It is easy for us to expand, but who is to buy the goods ? One simple instance. The Soap industry in this country is not even producing 45 per cent of its installed capacity. Is it because that it cannot produce more or is it unwilling to produce more because there is no demand for the production ? Would it not be necessary for every industry to think of all these things ? We must start such new industries which does not exist in any other part of the country.

Secondly I would say about the private sector. Have they not sufficient intention, sufficient initiative, sufficient capital to start industries of their own ? Certainly they have. The only trouble is, what to start and with what results and that is troubling me much more than either the intention or the initiative or the capital.

That is why I said I am rather surprised that a hundred crores has been allotted for this purpose. Of course, I can understand that though it does not come under industries, the Honnemaradu scheme which takes a fair part of this investment is there. I am very glad that the Government is pushing that scheme and I expect that their efforts will be rewarded as soon as possible. Without it I can confidently say we have no future. I am a little sceptic that the Government will increase the industrial development of the State because I know the Mysore Government with 25 years of industrial perience—I know where they stand.

SRI H. SIDDAVEERAPPA.—Stand well.

SRI V. M. MASCARENHAS.—I leave it at that.

I will now go to the next subject. I congratulate the Government on their bold policy of seeing that water supply is given practically all over the State and for the abundant provision that they have made for this purpose. After all, drinking water is a human necessity and I am glad that the Government have said boldly that they will spend a couple of crores of rupees for this purpose. My thanks to them.

Coming to housing, at long last I am glad that the Government has realised that low income groups existing in this country need some encouragement. Hitherto, it was only pampering the industrial worker. At last the Government with the help of the Centre have decided to start a one crore scheme for building houses for the low income groups. May I suggest that instead of trying to give 1,800 houses for a crore of rupees, it could be broken up into smaller houses ? After all, each house here costs Rs. 6,000. There are very many people in this country who would live in smaller houses costing a couple of thousands or even Rs. 3,000 each.

It is very gratifying to see that the Department of Road Transport has had a good year of fine performance.

A MEMBER.—Is that because of overcrowding ?

SRI V. M. MASCARENHAS.—I congratulate the Department and the Minister concerned on that. They are hoping to do better. I wish them the best of luck. Only I will say that they should be more particular of taking up a few more routes where there is heavy traffic and also see if they can reduce the rates a little, if possible.

I do not want to take much time because there are other members to speak. I will only say how happy I am that the Government has spared no pains to allot fairly large sums of money for every nation building work as also for every social service. It is only my earnest hope that this money will be wisely spent and that every man in every taluk and in every village will reap the benefits of this wise spending of money and that every citizen in Mysore State will grow more prosperous, more contented and more happy.

ಶ್ರೀ ಜಿ. ಶಿವಪ್ಪ (ಹೊಳಲ್‌ಕೆರೆ).—ಸ್ವಾಮಿ ಈಗ ನಮ್ಮ ಮುಂದೆ ಇಟ್ಟಿರತಕ್ಕಂಥ ಆಯವ್ಯಯವನ್ನು ನಾನು ಸ್ವಾಗತಿಸುತ್ತೇನೆ. ಪ್ರಾರಂಭದಲ್ಲೇ ಈ ಸಭೆಯ ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಸರ್ಕಾರ ತಯಾರಿಸಿಟ್ಟಿರತಕ್ಕಂಥ ಬಡ್ಜೆಟ್ ಪಟ್ಟಿಯನ್ನು ನೋಡಿದ ಕೂಡಲೆ—''ನಾವು ಡೆಸ್ಪರೇಟ್ ಆಗಿದ್ದೇವೆ; ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನೋಡಿದರೆ ನಮ್ಮ ಮೇಲೆ ಹೊರಲಾರದಷ್ಟು ತೆರಿಗೆಗಳನ್ನು ಹಾಕುತ್ತಿದ್ದಾರೆ, ಇದರಿಂದ ನಾನು ಬಹಳ ಭಯಗ್ರಸ್ತನಾಗಿದ್ದೇನೆ, ಇಂಥ ಭಯಪಡುವ ಪ್ರಸಂಗ ಬಂದಿದೆ'' ಎಂದು ಅವರು ಹೇಳಿದರು. ನಾನಾದರೂ ಅವರಿಗೆ ಇಷ್ಟೇ ಹೇಳುತ್ತೇನೆ—ಹಾಗೆ ಅವರು ಭಯಗ್ರಸ್ಥರಾಗಲು ಅಂಥದಕ್ಕೇನೂ ಅವಕಾಶವೇ ಇಲ್ಲ ಎಂದು ಈ ದಿವಸ ನಮ್ಮ ಸರ್ಕಾರದವರು ತಯಾರಿಸಿಟ್ಟಿರತಕ್ಕಂಥ ಬಡ್ಜೆಟ್ ಬಹಳ ಸ್ವಾಗತಾರ್ಹವಾದುದಾಗಿದೆ. ಈ ದಿವಸ ನಾವೆಲ್ಲರೂ ಹೆಮ್ಮೆ ಪಡತಕ್ಕಂಥ ವಿಷಯ ಇದು.

(ಸಭೆಯಲ್ಲಿ ಅಡ್ಡ ಪ್ರಶ್ನೆಗಳನ್ನು ಹಾಕುವ ಗಲಾಟೆಯಾಗುತ್ತಿತ್ತು.)

ಟೀಕೆ, ಟಿಪ್ಪಣಿಗಳೂ ಕೂಡ ಬಹಳವಾಗಿವೆ. ಆದರೆ ನಾನು ಅವುಗಳಿಗೆಲ್ಲಾ ನನ್ನ ಭಾಷಣದ ಕೊನೆಯಲ್ಲಿ ಉತ್ತರ ಕೊಡಬೇಕೆಂಬುದಾಗಿ ಮನಸ್ಸು ಮಾಡಿದ್ದೇನೆ. ಈಗ ನಾನು ಹೇಳುತ್ತಿರುವುದು ಈ ಬಡ್ಜೆಟ್ ಬಹಳ ಆಶಾದಾಯಕವಾದಂಥ ಬಡ್ಜೆಟ್ಟಾಗಿದೆ. ಈಗ ನಮ್ಮ ಸರ್ಕಾರ ನಮ್ಮ ಮುಂದೆ ಇಟ್ಟಿರತಕ್ಕಂಥ ಒಂದು ಪ್ಯಾಟರನ್ ಸೋಷಿಯಲಿಜಂ ಯಾವರೀತಿ ಬದಲಾವಣೆ ಆಗಿದೆಯೋ ಆ ಒಂದು ದೊಡ್ಡ ಸಿದ್ಧಾಂತವನ್ನು ದೇಶದ ಮುಂದಿಟ್ಟು ಅದಕ್ಕೆ ತಕ್ಕಹಾಗೆ ಇರುವಂಥ ಬಡ್ಜೆಟ್ಟನ್ನು ಇಂದು ತಯಾರಿಸಿದ್ದಾರೆ.

ಈ ತತ್ವವನ್ನು ಅವರು ಮನಸ್ಸಿನಲ್ಲಿಟ್ಟುಕೊಂಡೇ ಈ ಬಡ್ಜೆಟ್ಟನ್ನು ತಯಾರಿಸಿದ್ದಾರೆಂದು ನಾನು ಆಧಾರ ಪೂರ್ವಕವಾಗಿಯೂ ಮತ್ತು ಸಿದ್ಧಾಂತ ಪೂರ್ವಕವಾಗಿಯೂ ರುಜುವಾತು ಮಾಡತಕ್ಕ ಉದ್ದೇಶದಿಂದ ನಮ್ಮ ಆರ್ಥಿಕ ಪರಿಸ್ಥಿತಿ ಎಷ್ಟು ಉತ್ತಮಗೊಂಡಿದೆ, ಇದರಿಂದ ದೇಶ ಎಷ್ಟರಮಟ್ಟಿಗೆ ಮುಂದುವರಿಯುತ್ತಿದೆ ಎಂಬುದನ್ನು ನಾನೀಗ ಈ ಮಾನ್ಯ ಸಭೆಯ ಗಮನಕ್ಕೆ ತರಬೇಕೆಂದು ಇಚ್ಛೆ ಪಟ್ಟಿದ್ದೇನೆ.

ನಾವು ಈ ದಿವಸ ಈ ಬಡ್ಜೆಟ್ಟನ್ನು ಸ್ಥೂಲವಾಗಿ ವಿಚಾರ ಮಾಡಿದ್ದೇ ಆದರೆ ನಿಜವಾಗಿಯೂ ನಮ್ಮ ಆರ್ಥಿಕ ಸ್ಥಿತಿ ದಿನೇ ದಿನೇ ಮುಂದುವರಿಯುತ್ತಿದೆಯೆಂದು ನಾವು ಧಾರಾಳವಾಗಿ ಹೇಳಬಹುದು. ಆದರೆ ಹೀಗೆ ಹೇಳತಕ್ಕ ಕಾಲದಲ್ಲಿ ನಾವು ಕೇವಲ ಈ ಮೈಸೂರಿನ ಬಡ್ಜೆಟ್ ಒಂದನ್ನೇ ಗಮನದಲ್ಲಿಟ್ಟುಕೊಂಡು ಮಾತನಾಡುವುದಕ್ಕೆ ಬದಲಾಗಿ ಆ ಕೇಂದ್ರ ಸರ್ಕಾರದ ಬಡ್ಜೆಟ್ ಮತ್ತು ಅದರ ಜೊತೆಯಲ್ಲೇ ಈ ನಮ್ಮ ಮೈಸೂರಿನ ಬಡ್ಜೆಟ್ ಇವೆರಡನ್ನೂ ಇಟ್ಟುಕೊಂಡು, ಮಾತನಾಡತಕ್ಕದ್ದು ಆವಶ್ಯಕವೆಂದು ನಾನು ಭಾವಿಸಿದ್ದೇನೆ. ಈ ದಿವಸ ನಮ್ಮ ಸರ್ಕಾರ ಇಲ್ಲಿ ಕೈಗೊಂಡು ಕೆಲಸ ನಡೆಸುತ್ತಿರುವಂಥ ಅನೇಕ ದೊಡ್ಡ ದೊಡ್ಡ ಯೋಜನೆಗಳಿಗೆ ತಗಲುತ್ತಿರುವಂಥ ಖರ್ಚು ವೆಚ್ಚಗಳನ್ನೆಲ್ಲಾ ಆ ಕೇಂದ್ರ ಸರ್ಕಾರದವರು ಕೊಡುತ್ತಿದ್ದಾರೆ. ಹೀಗೆ ಅವರು ನಮ್ಮ ಸರ್ಕಾರಕ್ಕೆ ಹಣವನ್ನು ಸರಬರಾಯಿ ಮಾಡುತ್ತಿರುವುದರಿಂದ ನಾವೀ ದಿವಸ ಅದನ್ನು ಸಹ ನಮ್ಮ ಗಮನದಲ್ಲಿಟ್ಟುಕೊಂಡು ಮಾತನಾಡಬೇಕಾದುದು ಅವಶ್ಯಕ. ನಾನು ಮೊಟ್ಟ ಮೊದಲನೆಯದಾಗಿ ನಮ್ಮ ಆರ್ಥಿಕ ಪರಿಸ್ಥಿತಿಯ ಬಗ್ಗೆ ಒಂದೆರಡು ಮಾತುಗಳನ್ನು ತಿಳಿಸಬೇಕೆಂದಿದ್ದೇನೆ.

ಒಂದು ದೇಶದಲ್ಲಿ ಯಾವಾಗ ಪದಾರ್ಥಗಳ ಬೆಳೆಯು ಅಥವಾ ಅವುಗಳ ತಯಾರಿಕೆಯು ಕಮ್ಮಿಯಾಗುತ್ತಾ ಹೋಗುತ್ತದೆಯೋ ಆಗ ಆ ಪದಾರ್ಥಗಳ ಬೆಲೆಯು ಜಾಸ್ತಿಯಾಗುತ್ತಾ ಹೋಗುತ್ತದೆ. ಆಗಲೂ ಜನರು ಸರ್ಕಾರವನ್ನು ಟೀಕೆ ಮಾಡುತ್ತಾರೆ. ಆದರೆ ಈ ದಿವಸ ಆ ಪದಾರ್ಥಗಳ ಉತ್ಪನ್ನ ಜಾಸ್ತಿಯಾಗಿರುವಾಗ ಈಗಲೂ ಸಹ 'ಇದರಿಂದ ನಮ್ಮ ದೇಶದ ಆರ್ಥಿಕ ಸ್ಥಿತಿ ಕೆಟ್ಟುಹೋಗುತ್ತಿದೆ, ಪದಾರ್ಥಗಳ ಬೆಲೆಯೆಲ್ಲಾ ದಿನೇ ದಿನೇ ಇಳಿಯುತ್ತಿದೆ ಎಂದು ಸರ್ಕಾರವನ್ನು ನಮ್ಮ ವಿರೋಧ ಪಕ್ಷದ ನಾಯಕರು ಟೀಕೆ ಮಾಡಿದರು. ಒಂದು ನಾಣ್ಯಕ್ಕೆ ಎರಡು ಮುಖಗಳಿರುವಹಾಗೆ ಈ ಎರಡು ರೀತಿಯಲ್ಲೂ ಟೀಕೆ ಮಾಡಬಹುದು. ಆದರೆ ನಾವು ಈ ಸಂಬಂಧದಲ್ಲಿ ಕೆಲವು ಮುಖ್ಯವಾದ ಅಂಶಗಳನ್ನು ಪರಿಶೀಲನೆ ಮಾಡಬೇಕಾದದ್ದು ಅಗತ್ಯ. ಕೆಲವು ಪದಾರ್ಥಗಳಿಗೆ ಅವು ಎಷ್ಟು ಪ್ರಮಾಣದಲ್ಲಿರುತ್ತವೆಯೋ ಅಷ್ಟಕ್ಕೆ ತಕ್ಕಂತೆ ನಾಣ್ಯವೂ ಸಹ ಇರಲೇಬೇಕು. ಸಾಮಾನ್ಯವಾಗಿ ಉತ್ಪತ್ತಿ ಜಾಸ್ತಿ ಇರುವಾಗ ನಾಣ್ಯದ ಬೆಲೆ ಕಮ್ಮಿಯಾಗಿರುತ್ತದೆ.

Quantity is the theory of money in relation to velocity of circulation of money.

ಹೀಗೆ ಒಂದು ದೇಶದಲ್ಲಿ ಇರತಕ್ಕ ಪದಾರ್ಥಗಳ ಸಂಖ್ಯೆ ನಾಣ್ಯದ ಸಂಖ್ಯೆಗಿಂತ ಜಾಸ್ತಿ ಆದರೆ, ಅಥವಾ ನಾಣ್ಯದ ಮಟ್ಟಕ್ಕಿಂತ ಏರಿದ್ದರೆ, ಅಥವಾ ಹಣದ ಚಲಾವಣೆ ಜಾಸ್ತಿ ಇದ್ದರೆ ಪದಾರ್ಥಗಳ ಬೆಲೆಯು ಕಡಮೆಯಾಗಿಯೇ ಆಗುತ್ತದೆ.

ಹೀಗೆ ಪದಾರ್ಥಗಳ ಬೆಲೆ ಏರುಪೇರಾಗುವುದಕ್ಕೆ ಅವಕಾಶ ಕೊಡದಂತೆ ಆ ಕೇಂದ್ರ ಸರ್ಕಾರದವರು ತಮ್ಮ ಬಡ್ಜೆಟ್ಟನ್ನು ತಯಾರಿಸಿ ಸಭೆಯ ಮುಂದೆ ಇಟ್ಟಿರತಕ್ಕದ್ದರ ಬಗ್ಗೆ ಅವರು ಇದನ್ನು ಎಷ್ಟು ಬಿಗಿಯಿಂದ ಎಲ್ಲವನ್ನೂ ಕಂಟ್ರೋಲ್ ಮಾಡಿಕೊಂಡು ತಯಾರಿಸಿರುತ್ತಾರೆಂಬ ವಿಚಾರದಲ್ಲಿ ನಮ್ಮ ವಿರೋಧ ಪಕ್ಷದ ನಾಯಕರೂ ಸಹ ಅವರ ಮನಸ್ಸಿನಲ್ಲೇ ಸಂತೋಷ ಪಟ್ಟುಕೊಂಡಿರುತ್ತಾರೆಂದು ನಾನು ಹೇಳುತ್ತೇನೆ. ಈ ದಿವಸ ನಮ್ಮ ಬಡ್ಜೆಟ್ ಏತಕ್ಕೆ ಖೋತಾ ಆಗಿದೆ ಎಂದು ಕೇಳಿದರೆ ನಮ್ಮ ಪ್ರೊಡಕ್ಷನ್ ಜಾಸ್ತಿ ಯಾಗಿದೆ. ನಮ್ಮಲ್ಲಿ ಈ ಆಹಾರ ಪದಾರ್ಥಗಳ ಉತ್ಪನ್ನ ಮತ್ತು ಕೈಗಾರಿಕಾ ವಸ್ತುಗಳ ಉತ್ಪನ್ನ ಜಾಸ್ತಿಯಾಗಿದೆ. ಅವುಗಳ ಉತ್ಪತ್ತಿಯ ಸಂಖ್ಯೆ ಹೆಚ್ಚಿದೆ. ಅದಕ್ಕೆ ತಕ್ಕಹಾಗೆ ನಾಣ್ಯದ ಸಂಖ್ಯೆಯೂ ಹೆಚ್ಚಿದೆ. ಇದನ್ನು ಹೀಗೆ ಏರುಪೇರಾಗದಂತೆ ನೋಡಿಕೊಳ್ಳುತ್ತಿರುವುದು ಆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಸಂಸ್ಥೆಯವರ ಒಂದು ಜಾಣತನದ ನೀತಿಯಾಗಿರುತ್ತದೆಯೆಂದು ನಾವು ನಿಸ್ಸಂದೇಹವಾಗಿ ಹೇಳಬಹುದು. ಈ ಹಿಂದಿನ ವರ್ಷ 309 ಲಕ್ಷವಿದ್ದ ಖೋತಾ ಬಡ್ಜೆಟ್ ಈ ವರ್ಷ 409 ಲಕ್ಷಕ್ಕೆ ಹೋಗಿದೆ. ಆದರೆ ರೆವಿನ್ಯೂ ಮಾತ್ರ 23 ಕೋಟಿ 16 ಲಕ್ಷಕ್ಕೆ ನಿಂತಿದೆ. ಇದನ್ನು ನೋಡಿದರೆ ಇನ್‌ಫ್ಲೇಷನ್ ಏನೂ ಇಲ್ಲ. ಡಿಫ್ಲೇಷನ್ ಮಾತ್ರ ಇದೆ. ಇದು ಬಹಳ ಸ್ವಾಗತಾರ್ಹವಾದ ಮತ್ತು ಗಮನಾರ್ಹವಾದಂಥ ವಿಷಯ. ಇದರಿಂದ ನಾವು ಅಭಿವೃದ್ಧಿ ಕಾರ್ಯಗಳಲ್ಲಿ ಹಾಕುತ್ತಿರುವ ಹೆಜ್ಜೆಯನ್ನು ಮುಂದುವರಿಸುತ್ತಿದ್ದೇವೆ ಎಂದಾಯಿತು. ಈಗಾಗಲೇ ಶ್ರೀ ಮ್ಯಾಸ್ಕರನ್ ಹ್ಯಾಸ್‌ರವರು ತಿಳಿಸಿದ ಹಾಗೆ ಇಡೀ ಪ್ರಪಂಚದಲ್ಲೇ ಈ ದಿವಸ ನಮ್ಮ ಇಂಡಿಯ ಈ ಕಾಟನ್ ಕೈಗಾರಿಕೆಯಲ್ಲಿ ದ್ವಿತೀಯ ಸ್ಥಾನವನ್ನು ಗಳಿಸಿದೆಯೆಂದು ಹೇಳಿದ್ದಾರೆ.

(ಶ್ರೀ ಜಿ. ಶಿವಪ್ಪ.)

ಹೀಗೇನೇ ನಮ್ಮ ಆರ್ಥಿಕ ಪರಿಸ್ಥಿತಿ ಕೂಡ ಪ್ರತಿಯೊಂದು ವಿಚಾರದಲ್ಲೂ ಅನುಕೂಲವಾಗಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಪ್ರತಿಯೊಂದು ಮುಖದಲ್ಲೂ ದೇಶ ಮುಂದುವರಿಯುತ್ತಿದೆ. ಆ ಕಾರ್ಟ್ ಕೈಗಾರಿಕೆ ನಮ್ಮ ದೇಶದಲ್ಲಿ ಎಷ್ಟರಮಟ್ಟಿಗೆ ಅಭಿವೃದ್ಧಿ ಹೊಂದುತ್ತಿದೆಯೋ ಅದೇ ಮಟ್ಟದಲ್ಲಿ ಈ ಜೂಟ್, ಸಿಮೆಂಟ್ ಮತ್ತು ಕಾಗದ ಇವುಗಳ ತಯಾರಿ ಸಹ ಬಹಳ ಜಾಸ್ತಿಯಾಗುತ್ತಿದೆ. ಹೀಗೆ ಯಾವಾಗ ಉತ್ಪತ್ತಿ ಜಾಸ್ತಿಯಾಗುತ್ತದೆಯೋ ಆಗ ನಾಣ್ಯದ ಆವಶ್ಯಕತೆ ಕಮ್ಮಿ ಆಗಿಯೇ ಆಗುತ್ತದೆ. ಅದರಿಂದ ಧಾರಣೆಗಳು ಕಡಮೆಯಾಗಲೇ ಬೇಕು. ಇದು ಸಿದ್ಧಾಂತದಿಂದ ವ್ಯಕ್ತಪಟ್ಟಿದೆ. ಆದುದರಿಂದ ಡಿಫಿಸಿಟ್ಟನ್ನು ತಡೆಗಟ್ಟಲು ಸಾಧ್ಯವೇ ಇಲ್ಲ. ಆದ್ದರಿಂದಲೇ ಹೀಗೆ ಡಿಫಿಸಿಟ್ಟು ಬಡ್ಜೆಟ್ಟನ್ನು ತಯಾರು ಮಾಡತಕ್ಕದ್ದು ಆವಶ್ಯಕವೇ ಆಗಿದೆ. ಆದಕಾರಣ ಇದರಲ್ಲಿ ಅಷ್ಟೊಂದು ಚಿಂತೆಗೊಳಗಾಗುವುದಕ್ಕೆ ಅವಕಾಶವಿಲ್ಲವೆಂದು — ನಮ್ಮ ವಿರೋಧ ಪಕ್ಷದ ನಾಯಕರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ದಿವಸ ಹಣದ ಬೆಲೆ ಜಾಸ್ತಿಯಾಗಿರುವುದರಿಂದ ಪದಾರ್ಥಗಳ ಬೆಲೆ ಕಮ್ಮಿಯಾಗಿದೆ. ಆದಾಗ್ಯೂ ಈ ಹಿಂದೆ ನಾವು 50 ರೂಪಾಯಿಗಳನ್ನು ಕೊಟ್ಟರೆ ಎಷ್ಟು ಸಾಮಾನುಗಳನ್ನು ತರಬಹುದಾಗಿತ್ತೋ ಈ ದಿವಸ ಸಹ ಅದೇ 50 ರೂಪಾಯಿಗಳನ್ನು ಕೊಟ್ಟರೆ ಇನ್ನೂ ಹೆಚ್ಚು ಸಾಮಾನುಗಳನ್ನು ತರಬಹುದಾಗಿದೆ. ಇದರಿಂದ ಈ ದಿವಸ ಕೂಲಿಗಾರರಿಗೂ ಮತ್ತು ಸಂಬಳ ಸಾರಿಗೆಗಳನ್ನು ಪಡೆಯುತ್ತಿರುವವರಿಗೂ ತುಂಬ ಅನುಕೂಲವಾಗಿದೆ. ಅದರಲ್ಲೂ ಈ ನಿಖರವಾದ ಒಂದು ದೊಡ್ಡ ಸಂಬಳದ ಅಧಿಕಾರ ವರ್ಗಕ್ಕಂತೂ ಇದು ವಿಶೇಷ ಅನುಕೂಲವಾದಂಥ ಕಾಲ. ಈ ಒಂದು ಕಾರಣದಿಂದಲೇ ಈ ದೊಡ್ಡ ಗೆಜಿಟೆಡ್ ವರ್ಗದ ನೌಕರರಿಗೆ ಇಲ್ಲಿಯತನಕ ಕೊಟ್ಟುಕೊಂಡು ಬರುತ್ತಿದ್ದಂಥ ಹೈಪ್ರೈಸ್ ಅಲೋಯೆನ್ಸ್‌ನ್ನು ವಜಾಮಾಡಲು ಈಗ ಕಾಲಸನ್ನಿಹಿತವಾಗಿದೆ ಎನ್ನತಕ್ಕ ಉದ್ದೇಶದಿಂದ ನಾನ್ನು ಮೊನ್ನೆ ಒಂದು ಪ್ರಶ್ನೆಯನ್ನು ಈ ಸಭೆಯಲ್ಲೇ ಎತ್ತಿದೆ. ಈ ಅಲೋಯೆನ್ಸುಗಳಿಗಾಗಿಯೇ ಸರ್ಕಾರದ ಬೊಕ್ಕಸದಿಂದ ವಿಶೇಷ ಹಣ ವ್ಯಯವಾಗುತ್ತಿದೆ. ಆದ ಪ್ರಯುಕ್ತ ಈಗ ಸದ್ಯಕ್ಕೆ ಈ ಗೆಜೆಟೆಡ್ ಹುದ್ದೆಗಳಲ್ಲಿರತಕ್ಕಂಥ ವರ್ಗಕ್ಕಾದರೂ ಈ ಅಲೋಯೆನ್ಸುಗಳನ್ನು ತೆಗೆಯತಕ್ಕದ್ದು ಉಚಿತವಾಗಿದೆಯೆಂದು ನಾನು ಅಭಿಪ್ರಾಯ ಪಡುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—Sustenance ಜಾಸ್ತಿಯಾಗಿದೆಯೇ ಹೊರತು Purchasing power ಎಲ್ಲಿ ಜಾಸ್ತಿಯಾಗಿದೆ?

ಶ್ರೀ ಜಿ. ಶಿವಪ್ಪ.—ಅದೇನೋ ಸರ್ಕಾರದವರು ನನ್ನ ಪ್ರಶ್ನೆಗೆ ಒದಗಿಸಿದ್ದ ಉತ್ತರದಲ್ಲಿ ಹಾಗಿತ್ತು. ಆದರೆ ಈ ದಿವಸ ಈ ಆರ್ಥಿಕ ಪರಿಸ್ಥಿತಿಯು ಅಷ್ಟು ಹೆಚ್ಚು ಕಡಮೆ ಆಗದಿರುವಂತೆ ಕೇಂದ್ರ ಸರ್ಕಾರದವರು ಇದನ್ನು ಸ್ಟೆಬಿಲೈಜ್ ಮಾಡಿಕೊಂಡು ಬರುತ್ತಿರುವುದು ಬಹಳ ಗಮನಾರ್ಹವಾದಂಥ ಸಂಗತಿ.

ಆದರೆ ನಾನೀಗ ಮತ್ತೊಂದು ಗಮನಾರ್ಹವಾದ ವಿಷಯವನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕಾಗಿದೆ. ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ನಾವೀದಿವಸ ಎಲ್ಲೆಲ್ಲಿಯೂ ಈ 'ಪ್ಲಾನಿಂಗ್—ಪ್ಲಾನಿಂಗ್' ಎನ್ನುವ ವಿಷಯವನ್ನೇ ಕೇಳುತ್ತಿದ್ದೇವೆ.

5 P.M.

ಸಾಮಾನ್ಯವಾಗಿ ಕಮ್ಯುನಿಸ್ಟ್ ದೇಶಗಳಾದ ರಷ್ಯಾ ಮತ್ತು ಚೈನಾ ದೇಶಗಳಲ್ಲಿ ಇಂಥ ಯೋಜನೆಗಳನ್ನು ತಯಾರುಮಾಡುತ್ತಾರೆ. ನಾವು ತಯಾರು ಮಾಡಿರುವ ಯೋಜನೆಗಳು ನಮ್ಮ ವೈಶಿಷ್ಟ್ಯವೆಂದು ಬಹಳ ಹೆಮ್ಮೆಯಿಂದ ಹೇಳುತ್ತೇನೆ. ಏಕೆಂದರೆ, ನಮ್ಮಂತೆ ಪ್ರಜಾಪ್ರಭುತ್ವವಿರುವ ರಾಷ್ಟ್ರಗಳಲ್ಲಿ ಇಂಥ ಯೋಜನೆಗಳನ್ನು ಮಾಡಿಲ್ಲ. ಈ ರೀತಿ ಕೇಂದ್ರ ಪ್ಲಾನಿಂಗ್ ಕಮಿಷನ್ನಿನ ನೇತೃತ್ವದಲ್ಲಿ ಯೋಜನೆಗಳನ್ನು ತಯಾರಿಸಿ ನಮ್ಮ ಆರ್ಥಿಕಾಭಿವೃದ್ಧಿ ಮಾಡಿಕೊಳ್ಳುವುದು ಹಿಂದೂಸ್ಥಾನದ ಪ್ರಜಾಪ್ರಭುತ್ವಕ್ಕೇ ಒಂದು ದೊಡ್ಡ Compliment ಅಥವಾ ಗೌರವವೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಇದು ವರೆಗೆ ಯಾರೂ ಸಾಧನೆ ಮಾಡದೇಯಿರುವ ಚರಿತ್ರಾರ್ಹವಾದ ದೊಡ್ಡ ಸಾಧನೆಯನ್ನು ಭಾರತ ಸರ್ಕಾರದವರೂ ಮೈಸೂರು ಸರ್ಕಾರದವರೂ ಸಾಧಿಸಿದ್ದಾರೆಂದು ಹೇಳಿದರೂ ಅತಿಶಯೋಕ್ತಿಯಾಗಲಾರದೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿದ ಮೇಲೆ ಸರ್ಕಾರದ ಆರ್ಥಿಕ ನೀತಿಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. Socialistic Pattern ಎಂಬ ಯಾವ ಒಂದು ಸಿದ್ಧಾಂತವನ್ನು ಹೇಳಿದ್ದಾರೋ ಅದಕ್ಕನುಸಾರವಾಗಿಯೇ ನಮ್ಮ ಆಯವ್ಯಯದ ಅಂದಾಜು ತಯಾರಾಗುತ್ತಿದೆಯೆಂದು ಹೇಳಿದರೆ ತಪ್ಪಾಗುವುದಿಲ್ಲ. ಈ ಸಂದರ್ಭದಲ್ಲಿ ಒಂದು ವಿಷಯಕ್ಕಾಗಿ ವಿಷಾದ ಪಡುತ್ತೇನೆ. ಅದೇನೆಂದರೆ, ವಿರೋಧ ಪಕ್ಷದ ಮುಖಂಡರು ಕೆಲವು ಮಾತುಗಳನ್ನು ಹೇಳಿದರು; ಅಲ್ಲದೆ ಶ್ರೀಮಾನ್ ಪಟ್ಟಾಭಿರಾಮನ್‌ರವರು Socialistic Pattern of Society ಎಂಬುದರ ಅರ್ಥ ತಮಗಾಗಿಲ್ಲವೆಂದು ಹೇಳಿದುದನ್ನು ಕೇಳಿ ನನಗೆ ಆಶ್ಚರ್ಯವಾಯಿತು. "ಪತ್ರಿಕೆಗಳಲ್ಲಿ ಅನೇಕ್ಕ ರೀತಿಯಲ್ಲಿ ಬರುತ್ತದೆ, ಅದನ್ನು ಓದಿದ್ದೇನೆ, ಅದನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳುವುದು ಕಷ್ಟ" ಎಂದು ಹೇಳಿದರು. ಇದು ಶ್ರೀಮಾನ್ ಇಮಾಮ್‌ರವರಿಗೆ ಅರ್ಥವಾಗದೇಯಿರಬಹುದು, ಶ್ರೀಮಾನ್ ಪಟ್ಟಾಭಿರಾಮನ್‌ರವರಿಗೆ ಅರ್ಥವಾಗದೇಯಿರಬಹುದು; ಆದರೆ ಆಂಧ್ರ ದೇಶದ ಜನರಿಗೆ ಅರ್ಥವಾಗಿದೆ. ಸಮತಾವಾದದ ನಮೂನೆಯ ರಾಜ್ಯವೆಂದರೆ, ಅದರಲ್ಲಿ Public Finance and Taxation ನೀತಿ ಹೇಗಿರಬೇಕೆಂದರೆ, ಯಾವ ಮನುಷ್ಯನಿಗೆ ಕೊಡಲು ಶಕ್ತಿಯಿದೆಯೋ ಅವರಿಂದ ತೆರಿಗೆ ತೆಗೆದುಕೊಳ್ಳುವುದು; ದೇಶದಲ್ಲಿ ಉತ್ಪತ್ತಿಯಾಗತಕ್ಕ ಸಂಪಾದನೆಯನ್ನು ಸರ್ವರಿಗೂ ಸಮಾನತೆಯುಂಟಾಗುವ ರೀತಿಯಲ್ಲಿ ಖರ್ಚು ಮಾಡಬೇಕೆಂಬುದೇ ಈ ಒಂದು ಸಮತಾವಾದದ ಗುರಿಯಲ್ಲಿರತಕ್ಕ ತತ್ವವೆಂದು ನಾನು ತಿಳಿದು ಕೊಂಡಿದ್ದೇನೆ. ಯಾರು ಕೊಡಬಲ್ಲರೋ ಅವರಿಂದ ತೆರಿಗೆಯ ಮೂಲಕ ಹೆಚ್ಚು ಹಣವನ್ನು ಸರ್ಕಾರ ಸಂಪಾದನೆ ಮಾಡಿ ಸರ್ವರಿಗೂ ದೇಶದ ಐಶ್ವರ್ಯವನ್ನು ಹಂಚತಕ್ಕ ಮಾರ್ಗವನ್ನು ಸಮತಾವಾದದ ನಮೂನೆಯೆಂದು ತಿಳಿದು ಕೊಂಡಿದ್ದೇನೆ. ಇದನ್ನು ಅನೇಕ ರೀತಿಯಲ್ಲಿ ಮಾಡುತ್ತಿದ್ದೇವೆ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಇದನ್ನು ಸಾಧಿಸಬೇಕೆಂದು ಅತಿವೇಗವಾಗಿ ಹೋಗುತ್ತಿದ್ದಾರೆ. ಆದರೆ ನನ್ನದಾದರೂ, ಅವರಲ್ಲೊಂದು ಪ್ರಾರ್ಥನೆ. ಇದನ್ನು ಸಾಧಿಸಬೇಕೆಂಬುದನ್ನು ಸರ್ವರೂ ಒಪ್ಪುತ್ತೇವೆ, ಆದರೆ ವೇಗವಾಗಿ ಹೋಗಬೇಕಾದರೆ — ಬೀಳದೇಯಿರುವ ಹಾಗೆ ಹೋಗಬೇಕೆಂಬುದು ನನ್ನ ಪ್ರಾರ್ಥನೆ. ಸಂಪಾದನೆ ಸಂಕುಚಿತ ಅಥವಾ ಮೊಟಕಾಗದಂತೆ ಹೋಗಬೇಕು. ಈ

ಸಿದ್ಧಾಂತವನ್ನು ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಅಳವಡಿಸಿ ಕೊಳ್ಳುವಾಗ ಯಾರಿಗೂ ನಷ್ಟವಾಗದಂತೆ ಶಾಂತಿಯಿಂದ, ಸಮಾಧಾನದಿಂದ ಹೋಗಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಕಡಿದಾಳ್ ಮಂಜಪ್ಪ.—ಯಾರಿಗೂ ನಷ್ಟವಾಗದೇ ಸಮತಾವಾದವನ್ನು ಹೇಗೆ ಜಾರಿಗೆ ತರುವುದೆಂಬುದು ನನಗೆ ಗೊತ್ತಿಲ್ಲ!

ಶ್ರೀ ಜಿ. ಶಿವಪ್ಪ.—ಈ ಸಮತ್ತಾವಾದ್ದದ ಮಾನೆಯಲ್ಲಿರತಕ್ಕ ಈ ತತ್ವವನ್ನು ನಮ್ಮ ಮೈಸೂರು ಸಂಸ್ಥಾನದಲ್ಲಿ ಈಗಾಗಲೇ ನಡೆಸಿಕೊಂಡು ಬಂದಿದ್ದೇವೆ. ಉದಾಹರಣೆ ಹೇಳಬೇಕೆಂದರೆ, ನಮ್ಮ ಸಂಸ್ಥಾನದ ಕೈಗಾರಿಕೆ ಸಮತಾವಾದದ ಮೇಲಿರತಕ್ಕ ಕೈಗಾರಿಕೆಯೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಅನೇಕ ಕೈಗಾರಿಕೆಗಳನ್ನು ಸರ್ಕಾರದವರೇ ನಡೆಸುತ್ತಿದ್ದಾರೆ. ಸಮತಾವಾದ ಹೇಳುವುದೂ ಕೈಗಾರಿಕೆ ಮತ್ತು ಬಂಡವಾಳವನ್ನು ರಾಷ್ಟ್ರೀಕರಣ ಮಾಡಬೇಕೆಂದು. ಈ ತತ್ವವನ್ನನುಸರಿಸಿ, ಈಗ ನಮ್ಮಲ್ಲಿರುವ ಕೈಗಾರಿಕೆಗಳನ್ನು ಸರ್ಕಾರ ನಡೆಸುತ್ತಿರುವುದರಿಂದ ಸಮತಾವಾದದ ಗುರಿಯನ್ನು ನಾವು ಈಗಾಗಲೇ ಅನುಸರಿಸುತ್ತಿದ್ದೇವೆ. ಆದಕಾರಣ ಇದನ್ನು ಅರ್ಥಮಾಡಿಕೊಳ್ಳುವುದು ನಮಗೆ ಕಷ್ಟವಲ್ಲ. ನನ್ನ ಭಾಷಣದ ಪೀಠಿಕೆಯಾಗಿ ಇಷ್ಟು ಹೇಳಿ ಇನ್ನು ಮೈಸೂರು ಸಂಸ್ಥಾನದ ಐದು ವರ್ಷದ ಯೋಜನೆಯ ವಿಚಾರದಲ್ಲಿ ಕೆಲವು ಅಂಶಗಳನ್ನು ಹೇಳುತ್ತೇನೆ.

ತಮಗೆ ಗೊತ್ತಿರುವ ಹಾಗೆ, ಬಳ್ಳಾರಿ ನಮಗೆ ಸೇರಿದ ಮೇಲೆ 47·99 ಕೋಟಿ ರೂಪಾಯಿಗೆ ನಮ್ಮ ಮೊದಲ ಪಂಚವಾರ್ಷಿಕ ಯೋಜನೆಯನ್ನು ಮಾಡಿ, ಈ ಯೋಜನೆಯ ಗುರಿ ಮುಟ್ಟಲು ಸರಿಯಾಗಿ ಕೆಲಸ ಮಾಡಿರುವುದು ನಮಗೆ ಹೆಮ್ಮೆಯ ವಿಷಯ. ಇದನ್ನು ವಿಶದವಾಗಿ ಹೇಳಬೇಕೆಂದರೆ ಹೆಚ್ಚುಕಾಲ ಹಿಡಿಯಬಹುದು. ಆದಕಾರಣ ಕೆಲವು ವಿಚಾರಗಳನ್ನು ಮಾತ್ರ ಸೂಕ್ಷ್ಮವಾಗಿ ಹೇಳಲು ಅಪ್ಪಣೆ ಬೇಡುತ್ತೇನೆ. ಮೊದಲನೆಯದಾಗಿ ನೀರಾವರಿ ಯೋಜನೆಗಳಿಗಾಗಿ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಒಟ್ಟು 12 ಕೋಟಿ 66 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ನಿಗದಿ ಮಾಡಿದ್ದಾರೆ. ಎಷ್ಟು ಖರ್ಚು ಮಾಡಬೇಕೆಂದು ಯೋಚನೆ ಮಾಡಿತ್ತು, ಎಷ್ಟು ಕೆಲಸ ಮಾಡಿದೆ ಎಂಬುದು ಕೆಲವು ಉದಾಹರಣೆಗಳನ್ನು ಕೊಟ್ಟರೆ ಅರ್ಥವಾಗುತ್ತದೆ. ಭದ್ರಾ ಯೋಜನೆಗೆ 1953-54ರಲ್ಲಿ ಕೇವಲ 80 ಲಕ್ಷ ರೂಪಾಯಿಗಳನ್ನೊದಗಿಸಲಾಗಿತ್ತು. 1954-55ರಲ್ಲಿ ಅದನ್ನು 185 ಲಕ್ಷಕ್ಕೆ ಜಾಸ್ತಿ ಮಾಡಿದ್ದಾರೆ. ಇದು ಹೆಚ್ಚು ಪ್ರಗತಿದಾಯಕವಾಗಿದೆಯೇ ಇಲ್ಲವೇ ಎಂಬುದನ್ನು ಯೋಚನೆ ಮಾಡಬೇಕು. 1955-56ರಲ್ಲಿ 300 ಲಕ್ಷ ರೂಪಾಯಿಗಳನ್ನು ಒದಗಿಸಬೇಕೆಂದು ಮಾಡಿದ್ದಾರೆ. 1956ನೆಯ ಜೂನ್ ತಿಂಗಳ ಹೊತ್ತಿಗೆ ಇಪ್ಪತ್ತು ಸಾವಿರ ಎಕರೆಗಳಿಗೆ ನೀರನ್ನು ಕೊಡಬೇಕೆಂದು ಯೋಚನೆ ಮಾಡಿದ್ದಾರೆ. ನಾನು ಈ ಸಭೆಗೆ ಸದಸ್ಯನಾಗಿ ಬಂದ ಕಾಲದಲ್ಲಿ, ಈ ಕೆಲಸ ನಮ್ಮ ಜೀವಮಾನ ಕಾಲದಲ್ಲಿ ಮುಗಿಯುತ್ತದೆಯೋ ಇಲ್ಲವೋ ಎಂಬ ಅನುಮಾನವಿತ್ತು. ಏಕೆಂದರೆ, ಆಗ ಸರ್ಕಾರದವರು ವರ್ಷಕ್ಕೆ ಕೇವಲ 20-25 ಲಕ್ಷ ರೂಪಾಯಿ ಒದಗಿಸುತ್ತಿದ್ದರು. ಆದರೆ ರೆವಿನ್ಯೂ ಮಂತ್ರಿಗಳು ಬಹಳ ಸಾಹಸಪಟ್ಟು ಡೆಲ್ಲಿಗೆ ಹೋಗಿ ಹೆಚ್ಚು ಹೊಡೆದಾಡಿ ಮೂರುಕೋಟಿ ರೂಪಾಯಿ ಹಣ ಸಹಾಯವನ್ನು ಪಡೆದು ಬಂದಿದ್ದಾರೆ. ಈ ವಿಚಾರವನ್ನು ಗಮನಿಸಬೇಕು. ಅವರಲ್ಲಿ ತಪ್ಪಿದ್ದರೆ ಅನ್ನೋಣ, ಗುಣಕ್ಕೆ ಮಾತ್ಸರ್ಯವಿಲ್ಲವೆಂಬುದನ್ನು ಯೋಚನೆ ಮಾಡಬೇಕು.

ಹೀಗೆಯೇ ತುಂಗಾ ಮತ್ತು ನುಗು ಯೋಜನೆಗಳನ್ನೂ ಕಾರ್ಯಗತ ಮಾಡುತ್ತಿದ್ದಾರೆ. ತುಂಗಾ ಕಾಮಗಾರಿ ಮುಗಿಯುತ್ತಾ ಬಂದಿದೆ. ಎರಡನೆಯ ಯೋಜನೆಯಲ್ಲಿ ತಕ್ಕಷ್ಟು ಹಣ ಕೊಟ್ಟರೆ ಈ ಎರಡು ಯೋಜನೆಗಳೂ ಮುಗಿಯುವ ಸಂಭವವಿದೆ. ಬಳ್ಳಾರಿಯ ತುಂಗಭದ್ರಾ ಯೋಜನೆಯೂ ಮುಗಿಯುತ್ತಾ ಬಂದಿದೆ.

ಇನ್ನೊಂದು ಅತಿ ಮುಖ್ಯವಾದ ವಿಚಾರ. ನಮ್ಮಲ್ಲಿ ಉತ್ಪತ್ತಿಯಾಗುತ್ತಿರುವ ವಿದ್ಯುಚ್ಛಕ್ತಿ ಮುಗಿಯುತ್ತಾ ಬಂದಿದೆ. ಈಗ ಸರ್ಕಾರದವರು ಮಾಡುತ್ತಿರುವಂತೆ ಹಳ್ಳಿಗಾಡಿಗೆ ಮತ್ತು ಎಲ್ಲಾ ಟೌನ್‌ಗಳಿಗೂ ವಿದ್ಯುಚ್ಛಕ್ತಿಯನ್ನೊದಗಿಸಿದಮೇಲೆ ಲೋಡ್ ಹೆಚ್ಚುವುದರಿಂದ ಮುಂದೆ ಹೆಚ್ಚು ಉತ್ಪತ್ತಿ ಮಾಡಬೇಕು. ಇದಕ್ಕೆ ಹೊನ್ನೆಮರಡು ಯೋಜನೆಯನ್ನು ತೆಗೆದುಕೊಳ್ಳಬೇಕು. ಈ ಸಭೆಯ ನೂರು ಜನ ಸದಸ್ಯರೂ ಹೇಳುತ್ತಿದ್ದೇವೆ. ಇದನ್ನು ತೆಗೆದುಕೊಳ್ಳದಿರುವುದು ಸೂಕ್ತವಲ್ಲ. ಭದ್ರಾ ಯೋಜನೆಯ ಸಂಬಂಧದಲ್ಲಿ ಕೇಂದ್ರದೊಡನೆ ಹೊಡೆದಾಡಿದಂತೆ ಇದರ ಸಂಬಂಧದಲ್ಲಿಯೂ ಖಾಡಾ ಖಾಡಿ ಹೊಡೆದಾಡಿ, ಹೆಚ್ಚು ಪ್ರಯತ್ನಮಾಡಿ ಈ ಯೋಜನೆಯನ್ನು ಸೇರಿಸುತ್ತಾರೆಂದು ನಂಬಿದ್ದೇನೆ. ವಿದ್ಯುಚ್ಛಕ್ತಿಯ ವಿಚಾರ ಹೇಳುವಾಗ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಅದು ಮಂತ್ರಿಗಳೂ ನಾವೂ ಹೆಮ್ಮೆ ಪಡುವ ವಿಚಾರ. ನಮ್ಮ ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯ per capita 67 ಯೂನಿಟ್‌ಗಳು, ಇದೇ ಬೇರೆ ಪ್ರಾಂತ್ಯಗಳಲ್ಲಿ ಕೇವಲ 25-30 ಇದೆ. ಟೀಕೆ ಮಾಡುವವರು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಕೈಗಾರಿಕೆಗಳ ವಿಚಾರದಲ್ಲಿ ನಮ್ಮ ಸರ್ಕಾರದವರು ಏನು ಸಾಧಿಸಿದ್ದಾರೆಂಬುದನ್ನು ಈಗಾಗಲೇ ಮಾನ್ಯ ಮಿತ್ರರು ಹೇಳಿದ್ದಾರೆ. ಒಟ್ಟಿನಲ್ಲಿ ಕೈಗಾರಿಕೆಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿದ್ದಾರೆ. ಸಭೆಯಲ್ಲಿ ಈಗ ಕೈಗಾರಿಕೆ ಮಂತ್ರಿಗಳು ಹಾಜರಿಲ್ಲ, ಆದರೂ ಚಿಂತೆಯಿಲ್ಲ. ಉದಾಹರಣೆಗೆ ಕಬ್ಬಿಣದ ಕಾರ್ಖಾನೆಯಿಂದ ಹೆಚ್ಚಿನ ಲಾಭ ಬಂದು ಅಲ್ಲಿನ ಕೆಲಸಗಾರರಿಗೆ ಮೂರು ತಿಂಗಳ ಬೋನಸ್ ಕೊಟ್ಟಿದ್ದಾರೆ. ಇದನ್ನು ಸಂತೋಷದಿಂದ ಹೇಳುತ್ತೇನೆ. ಅಲ್ಲಿ ಮೂರು ವರ್ಷಗಳ industrial truce ಮಾಡಿ ಒಂದು ಶಾಂತಿಯುತ ಯುಗವನ್ನೇ ಆರಂಭಿಸಿದ್ದಾರೆ. ಇದು ನಮ್ಮ ಚರಿತ್ರೆಯಲ್ಲಿ ಗಣನೀಯವಾದ ಪ್ರಸಂಗವೆಂದರೆ ಅದು ಅತಿಶಯೋಕ್ತಿಯಲ್ಲ. 45·88 ಲಕ್ಷ ರೂಪಾಯಿನ ಮೇಲೆ ಶೇಕಡ 8·3ರಷ್ಟು ಲಾಭ ಬಂದಿದೆ. ಟ್ಯೂಬುಗಳು ಮತ್ತು ಪೈಪುಗಳ ತಯಾರಿಕೆ ಬಹಳ ಮುಖ್ಯವಾದುದು, ಅದನ್ನು ಪ್ರಾರಂಭಿಸಿದ್ದಾರೆ.

ಹೀಗೆಯೇ ಸಾಬೂನಿನ ಕಾರ್ಖಾನೆಯಿಂದ ಗಣನೀಯವಾದಷ್ಟು ಲಾಭ ಬಂದಿದೆ. ಇದರ ಉತ್ಪತ್ತಿಯನ್ನು 600 ಟನ್‌ಗಳಿಂದ 1,500 ಟನ್‌ಗಳಿಗೆ ಹೆಚ್ಚು ಮಾಡಬೇಕೆಂದು ಯೋಜನೆ ಮಾಡಿದ್ದಾರೆ. ಅಲ್ಲದೆ ಈಗ ಈ ಕಾರ್ಖಾನೆಯನ್ನು ಜಯನಗರ ಬಡಾವಣೆಗೆ ವರ್ಗ ಮಾಡಬೇಕೆಂಬ ಯೋಚನೆಯಿದೆ.

ಪೋರ್ಸಲೀನ್ ಕಾರ್ಖಾನೆಯಲ್ಲಿ high tension insulators ತಯಾರಿಕೆಗಾಗಿ 63 ಲಕ್ಷ ರೂಪಾಯಿಗಳನ್ನೊದಗಿಸಿದ್ದಾರೆ. ಹೀಗೆ ಕೈಗಾರಿಕೆಯ ವಿಚಾರದಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿರುವುದು ಬಹಳ ಗಮನಾರ್ಹವಾದ ವಿಚಾರ. ಈ ಕ್ಷೇತ್ರದಲ್ಲಿ ಸರ್ಕಾರ

(ಶ್ರೀ ಜಿ. ಶಿವಪ್ಪ.)

ಎಷ್ಟುಮಟ್ಟಿನ ಪ್ರೋತ್ಸಾಹ ಕೊಟ್ಟಿದ್ದಾರೆಯೋ ಹಾಗೆಯೇ private sectorನಲ್ಲಿಯೂ ಪ್ರೋತ್ಸಾಹ ಕೊಟ್ಟಿದ್ದಾರೆ. 1948ನೆಯ ಇಸವಿಯ ಕೈಗಾರಿಕೆ ನೀತಿಗೆ ಸಂಬಂಧಪಟ್ಟ ನಿಯಮಗಳಿಗನುಸಾರವಾಗಿ ಖಾಸಗೀ ಜನರಿಗೆ ಈ ಕ್ಷೇತ್ರದಲ್ಲಿ ಸರ್ಕಾರದವರು ಕೊಟ್ಟಿರುವ ಪ್ರೋತ್ಸಾಹವನ್ನು ನಾವು ಮರೆಯ ಬಾರದು. ಇದಕ್ಕೆ ಒಂದು ಉದಾಹರಣೆ ಕೊಡುವು ದಾದರೆ, ನಾಲ್ಕು ಹೊಸ ಸಕ್ಕರೆ ಕಾರ್ಖಾನೆಗಳನ್ನಾ ರಂಭಿಸಲು ಲೈಸೆನ್ಸ್ ಕೊಡಬೇಕೆಂದು ಸರ್ಕಾರದವರು ಯೋಚನೆ ಮಾಡಿದ್ದಾರೆ. ಇದು ಬಹಳ ಸಂತೋಷದ ವಿಷಯ. ಈಗಾಗಲೆ ಕೆಲವಕ್ಕೆ ಅನುಮತಿ ಕೊಟ್ಟಿ ದ್ದಾರೆ. ಈ ಸಂಬಂಧವಾಗಿ ಸರ್ಕಾರ ಕೊಂಡು ಕೊಳ್ಳುವ 20 ಲಕ್ಷ ರೂಪಾಯಿ ಷೇರಿನ ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿರುವುದು ಹೆಮ್ಮೆಯ ವಿಚಾರ.

5-30 P. M.

ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ವಿಚಾರ. ನನಗೂ ರೋಡ್ ಟ್ರಾನ್ಸ್‌ಪೋರ್ಟ್‌ಗೂ ಹೆಚ್ಚಿನ ಸಂಬಂಧ ಉಂಟು. ಹೇಗೆಂದರೆ, ನಾನು ಯಾವಾ ಗಲೂ ಬಸ್ಸಿನಲ್ಲೇ ಬರುವುದು. ಈ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯನ್ನು ಹೆಚ್ಚು ಮುಂದು ವರಿಸಬೇಕು, ಹೆಚ್ಚು ವಿಸ್ತೀರ್ಣಗೊಳಿಸಬೇಕು. ಕಾರಣ ವಿಷ್ಟೆ: ಸರ್ಕಾರಿ ಬಸ್ಸಿನ ಪ್ರಯಾಣಕ್ಕೂ ಖಾಸಗೀ ಬಸ್ಸಿನ ಪ್ರಯಾಣಕ್ಕೂ ಹೋಲಿಸಿದರೆ ಸರ್ಕಾರಿ ಬಸ್ಸಿ ನಲ್ಲಿ ಪ್ರಯಾಣ ಬಹಳ ಉತ್ತಮ. ಸರ್ಕಾರದವರು ಎಷ್ಟೇ ಕೆಟ್ಟವರೆಂದರೂ, ಅವನ್ನು ಎಷ್ಟೇ ಟೀಕೆ ಮಾಡಿದರೂ ಸರ್ಕಾರಿ ಬಸ್ಸಿನಲ್ಲಿ ಪ್ರಯಾಣ ಮಾಡು ವಾಗ ಸರ್ಕಾರವನ್ನು ಸಂತೋಷದಿಂದ ಜ್ಞಾಪಕ ಮಾಡಿಕೊಂಡಿದ್ದೇನೆ. ಸರ್ಕಾರಿ ಬಸ್ಸುಗಳು ಪ್ರಯಾ ಣಿಕರಿಗೆ ಬಹಳ ಅನುಕೂಲವಾಗಿವೆ. ಈ ರೀತಿ ಸಮಾಜ ಸೇವೆ ಮಾಡತಕ್ಕ ಈ ಇಲಾಖೆಯನ್ನು ಹೆಚ್ಚು ಅಭಿವೃದ್ಧಿ ಮಾಡುವುದು ಸರ್ಕಾರದ ಕರ್ತವ್ಯ. Passengers ದೃಷ್ಟಿಯಿಂದ ಇದು public utility concern ಆಗಿರುತ್ತದೆ. ಸರ್ಕಾರದ ದೃಷ್ಟಿಯಲ್ಲಿ ಇದರಿಂದ ಲಾಭ ಬರುತ್ತದೆ. Private Busನಿಂದ ಆಗತಕ್ಕಂಥ ತೊಂದರೆಯನ್ನು ಗಮನಕ್ಕೆ ತೆಗೆದು ಕೊಂಡರೆ ಅದು ಭಗವಂತನೇ ಬಲ್ಲ. ಏಳು ಘಂಟೆಗೆ ಬಸ್ ಬಿಡುವವರು ಒಂಬತ್ತು ಘಂಟೆಗೆ ಬಿಡುತ್ತಾರೆ. ನೀವು overload ಶೇಕಡ 25 ಮಾಡಿದರೆ ಅವರು ಶೇಕಡ 75-100 ಮಾಡುತ್ತಾರೆ. Bus topನ ಮೇಲೂ passengersನ್ನು ಹಾಕಿಕೊಂಡು ಬಂದಿರ ತಕ್ಕಂಥಾದ್ದನ್ನು ನೋಡಿದ್ದೇನೆ; ಕಣ್ಣು ಮುಚ್ಚಿ ಕೂತುಕೊಂಡು ನೋಡದವನಂತೆ ಬಂದೆ. ಇದರ ಬಗ್ಗೆ ನಮಗೆ ಏನೂ ಮಾಡುವುದಕ್ಕಾಗುವುದಿಲ್ಲ. ಅವರು ರೂಲ್ಸ್ ಮತ್ತು ರೆಗ್ಯುಲೇಷನ್ಸ್‌ಗಳನ್ನು ಸ್ವಲ್ಪವೂ ಸಹ ಪರಿಪಾಲನೆ ಮಾಡುತ್ತಾ ಇಲ್ಲ. ಈ Private Busಗಳಿಂದ ಪ್ರಯಾಣಿಕರಿಗೆ ಬಹಳ ಕಿರು ಕುಳ ಆಗುತ್ತಿದೆ. ಅದಷ್ಟು ಮಟ್ಟಿಗೆ ಜಾಗ್ರತೆ ಇಡೀ ಸಂಸ್ಥಾನಾ ಮಳೆ Road Transportನ್ನು ಧೈರ್ಯ ವಾಗಿ ರಾಷ್ಟ್ರೀಕರಣ ಮಾಡಬೇಕು ಎಂದು ಹೇಳು ತ್ತೇನೆ. ಈ ಸಭೆಯಲ್ಲಿರುವ ಅನೇಕ ಮಾನ್ಯ ಸ್ನೇಹಿತರಿಗೆ ತೊಂದರೆಯಾಗಬಹುದು.

Mr. SPEAKER.—I do not allow any imputation.

ಶ್ರೀ ಜಿ. ಶಿವಪ್ಪ.—ಆದರೂ ಚಿಂತೆ ಇಲ್ಲ. ಇದರಿಂದ public ಗೆ ಅನುಕೂಲವಾಗುತ್ತದೆ. ಇನ್ನೊಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಾ ಇರುವುದು ಏನೆಂದರೆ ಅದು ಚಿತ್ರದುರ್ಗ—ತುಮಕೂರು ಲೈನನ್ನು Monopoly ಮಾಡಬೇಕೆಂದು. ಚಿತ್ರದುರ್ಗದಿಂದ ಬರತಕ್ಕ ಮಾನ್ಯ ಸದಸ್ಯರುಗಳಾದ ನಾವುಗಳು ಮತ್ತು ಅನೇಕರು ಸೇರಿ 2-3 ವರ್ಷಗಳಿಂದ ಇದನ್ನು ಕೇಳಿಕೊಳ್ಳುತ್ತಿದ್ದೇವೆ. ತಾವು ಚಿತ್ರದುರ್ಗದಿಂದ ತುಮಕೂರಿನವರೆಗೆ Nationalise ಮಾಡಿದ್ದೀರಿ. ಆದರೆ ಚಿತ್ರದುರ್ಗದಿಂದ ತುಮಕೂರಿನವರೆಗೆ ರೋಡ್ ಟ್ರಾನ್ಸ್‌ಪೋರ್ಟಿನ $\frac{1}{3}$-ಭಾಗದ ಆದಾಯ ಚಿತ್ರದುರ್ಗ ದವರಿಂದಲೇ ಬರುತ್ತದೆ ಎಂಬುದನ್ನು ತಾವು ಜ್ಞಾಪಕ ದಲ್ಲಿಟ್ಟುಕೊಳ್ಳಬೇಕಾಗಿದೆ. ಚಿತ್ರದುರ್ಗದಿಂದ ಬೆಂಗ ಳೂರಿನವರೆಗೆ ಇರುವ ರಸ್ತೆ National Highways ಗೆ ಸೇರಿದೆ. ಆದರೆ ರೋಡ್ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟಿನ ಒಂದು ಬಸ್ ಸಹ ಅದರಲ್ಲಿ ಹೋಗುತ್ತಾ ಇಲ್ಲ. ಚಿತ್ರದುರ್ಗದಲ್ಲಿ ಒಂದು workshop ಸ್ಥಾಪನೆ ಮಾಡಿಬಿಟ್ಟು ಈ workshop ಸ್ಥಾಪನೆ ಮಾಡಿದ ನಂತರ, ಚಿತ್ರದುರ್ಗದಿಂದ ಬಳ್ಳಾ ರಿಗೂ, ಶಿವಮೊಗ್ಗಾಕ್ಕೂ, ದಾವಣಗೆರೆಯಿಂದ ಹರಿ ಹರಕ್ಕೂ ಯಥೇಷ್ಟವಾಗಿ ಬಸ್‌ಗಳನ್ನು ಓಡಾಡಿಸಿದರೆ ಸರ್ಕಾರಕ್ಕೆ ಆದಾಯ ಹೆಚ್ಚಿಗೆ ಬರುತ್ತದೆ ಎಂದು ಧೈರ್ಯವಾಗಿ ಹೇಳುತ್ತೇನೆ. ರಸ್ತೆಗಳು ಬಹಳ ಉತ್ತಮ ದರ್ಜೆಯ ರಸ್ತೆಗಳು. ಈ ಸಂದರ್ಭದಲ್ಲಿ ತಮಗೂ ಒಂದು ವಿಷಯ ಹೇಳಬೇಕಾಗಿದೆ. ನಾವು ಅನೇಕ ಟೀಕೆಗಳನ್ನು ಮಾಡಿದ ಮೇಲೆ ಈ ರಸ್ತೆಗಳನ್ನು ಬಹಳ improve ಮಾಡಿದ್ದೀರಿ. ಅದರಲ್ಲೂ National Highways ನ್ನು ಉತ್ತಮ ಸ್ಥಿತಿಗೆ ತಂದಿದ್ದೀರಿ. ಒಟ್ಟು net income Road Transport Department ನಿಂದ 8,58,000 ರೂಪಾಯಿಗಳು ಬಂದಿವೆ. ಒಟ್ಟು ಲಾಭ ಮುಂದಿನ ವರ್ಷಕ್ಕೆ ಸುಮಾರು 12 ಲಕ್ಷ ರೂಪಾಯಿಗಳು ಬರ ತಕ್ಕಂಥ ಸಂಭವವಿದೆ. ಆದ್ದರಿಂದ ಜನರ ಅನುಕೂಲದ ದೃಷ್ಟಿಯಿಂದಲೂ ಸಂಸ್ಥಾನಕ್ಕೆ ಒಂದು elastic source of revenue ಆಗುವ ದೃಷ್ಟಿ ಯಿಂದಲೂ ಈ ಇಲಾಖೆಯ ಕಾರ್ಯಕಲಾಪಗಳನ್ನು ಹೆಚ್ಚಿಗೆ ಮಾಡಿ ದೇಶದಲ್ಲಿ ಎಲ್ಲಾ ಉತ್ತಮವಾದ ರೋಡ್ಡು ಗಳು ಇವೆಯೋ ಅಲ್ಲಲ್ಲಿ ಸರ್ಕಾರದ ಬಸ್‌ಗಳನ್ನು ಏರ್ಪಡಿಸಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳು ತ್ತೇನೆ.

ಆ ಮೇಲೆ ವಿದ್ಯಾಭ್ಯಾಸದ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಲು ಅಪೇಕ್ಷಿಸುತ್ತೇನೆ. ಸುಧಾರಣೆ ತಂದದ್ದು ಬಹಳ ಸಂತೋಷದ ವಿಚಾರ ವೆಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಮೊದಲು ಈ ಸುಧಾರಣೆಗಳಿಗೆ ಹೆಚ್ಚಿಗೆ publicity ಕೊಡದೆ ಎಂಟು ದಿವಸಗಳ ಹಿಂದೆ ಮಾತ್ರ ಈ ಸುಧಾರಣೆ ಗಳನ್ನು ಜಾರಿಗೆ ತರುತ್ತೇವೆಂದು ಹೇಳಿ ಪ್ರಕಟಣೆ ಹೊರಡಿಸಿ ಅವುಗಳನ್ನು ಜಾರಿಗೆ ತಂದಿರಿ. ಅವರಿಗೆ ಪಾಠಪ್ರವಚನಗಳಿಗೆ ಪುಸ್ತಕಗಳಿಲ್ಲ. ಅವರ ಪರಿಸ್ಥಿತಿ ಚಿಂತಾಜನಕವಾಗಿದೆ. ನಾನು ಪ್ರೈಮರಿ ಶಾಲೆಗಳಿಗೆ ಹೋಗುವ ಮಕ್ಕಳನ್ನು ಹೊಂದಿರುತ್ತೇನೆ. ಇವೊತ್ತಿನ ದಿವಸ ಪ್ರೈಮರಿ ಸ್ಕೂಲು ವಿದ್ಯಾಭ್ಯಾಸ ಮಾಡುವ ಮಕ್ಕಳಿಗೆ ಯಾವ ಪುಸ್ತಕದಲ್ಲಿ ಪಾಠ ಹೇಳಿಕೊಡಬೇಕು ಯಾವ ಪುಸ್ತಕನ್ನಿಟ್ಟಿದ್ದಾರೆ ಎಂಬುದು ಉಪಾಧ್ಯಾ ಯರಿಗೆ ಗೊತ್ತಿಲ್ಲ; ಮಕ್ಕಳಿಗೂ ಗೊತ್ತಿಲ್ಲ, ನನಗೂ ಗೊತ್ತಿಲ್ಲ. ಆದ್ದರಿಂದ ಇದನ್ನು ಜ್ಞಾಪಕದಲ್ಲಿಟ್ಟು ಕೊಂಡು ಅತಿ ಜಾಗ್ರತೆಯಾಗಿ ಈ ತೊಂದರೆಗಳನ್ನು ನಿವಾರಿಸಲು ಪಾಠದ ಪುಸ್ತಕಗಳನ್ನು ಪ್ರಿಂಟ್‌ಮಾಡಿಸಿ ಹಂಚುವುದು ಅತ್ಯಾವಶ್ಯಕವೆಂದು ಕೇಳಿಕೊಳ್ಳುತ್ತೇನೆ.

ಇದರಲ್ಲಿ ಒಂದು ಅತ್ಯಂತ ಮುಖ್ಯ ವಿಚಾರವೇನೆಂದರೆ ನಮ್ಮ ವಿರೋಧ ಪಕ್ಷದ ನಾಯಕರಾಗಿರುವ ಶ್ರೀಮಾನ್ ಇಮಾಂರವರು ಹಿಂದೆ ಮಂತ್ರಿಮಂಡಲದಲ್ಲಿದ್ದಾಗ ವಿದ್ಯಾಭ್ಯಾಸಕ್ಕಾಗಿ ಸುಮಾರು 40,000,000 ರೂಪಾಯಿಗಳನ್ನು ಖರ್ಚುಮಾಡುತ್ತಿದ್ದರು; ಇವೊತ್ತಿನ ದಿವಸ ವಿದ್ಯಾಭ್ಯಾಸಕ್ಕೆ 4,46,48,000 ರೂಪಾಯಿಗಳನ್ನು ಖರ್ಚುಮಾಡುತ್ತೇವೆ. ಇದನ್ನು ನೋಡಿದರೆ ಯಾರು ತಾನೇ ಹೆಮ್ಮೆಪಡಬಾರದು ? ಸ್ವಲ್ಪ ಹಣವೇ ? ವಿಪರೀತವಾದ ಹಣ. ಮೊನ್ನೆ Academic Council ನಲ್ಲಿ fees ಜಾಸ್ತಿಮಾಡಬೇಕು ಮತ್ತು ಸ್ತ್ರೀಯರಿಗೆ ಕೊಟ್ಟಿರತಕ್ಕ ಮಾಫಿಯನ್ನು ತೆಗೆದು ಹಾಕಬೇಕೆಂಬುದನ್ನು ನಾನು ಹೇಳಿ ಅನೇಕ ಸ್ತ್ರೀಯರ ವಿರೋಧಕ್ಕೆ ಪಾತ್ರನಾದೆ. ಅದೇ ವಾದವನ್ನೇ ಇಲ್ಲಿಯೂ ಹೇಳುತ್ತೇನೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಬಹಳ ಉದಾರವಾದ ಕಾರ್ಯವನ್ನು ಮಾಡಿದಿರಿ. ಅದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಜಿ. ಶಿವಪ್ಪ.—ಈಗಿನ ಎಲ್ಲಾ ವಿದ್ಯಾಭ್ಯಾಸಗಳಲ್ಲಿ ಪ್ರೈಮರಿ ವಿದ್ಯಾಭ್ಯಾಸ ಬಹಳ ಮುಖ್ಯವಾದುದು. ಯೂನಿವರ್ಸಿಟಿ ಫೀಸನ್ನು ಜಾಸ್ತಿಮಾಡಬೇಡಿ ಎಂದು ಹೇಳುವುದಿಲ್ಲ. ಫೀಸ್ ನಾವು ಕೊಡುವುದು ಬಹಳ ಕಮ್ಮಿ. 42 ಲಕ್ಷ ಅಥವಾ 50 ಲಕ್ಷ block grant ನ್ನು ಬೇಕಾದರೆ ಕೊಡಿ. ಯೂನಿವರ್ಸಿಟಿ Autonomy ವಿಚಾರವಾಗಿ ನಮ್ಮ ಅನೇಕ ಮುಖಂಡರುಗಳೂ, ನಾಯಕರೂ ಹೇಳುತ್ತಿದ್ದಾರೆ. ಎಲ್ಲಿಯವರೆಗೆ ತಾವು ತಮ್ಮ Purse ನ್ನು ಜಾಸ್ತಿಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಅದು Autonomy ಎಂದು ಎನ್ನಿಸಿಕೊಳ್ಳುವುದಿಲ್ಲ. Autonomy ಆಗುತ್ತದೆ. ಅವರ Income ಜಾಸ್ತಿಮಾಡಿಕೊಳ್ಳಬೇಕು. ನಮ್ಮ Constitution ನಲ್ಲಿ ಹೇಳುವ ರೀತಿಯಲ್ಲಿ ಪ್ರತಿಯೊಬ್ಬರಿಗೂ ಪ್ರೈಮರಿ ಸ್ಟೇಜಿನಲ್ಲಿ 14 ವರ್ಷ ವಯಸ್ಸಿನವರೆಗೆ ಕಡ್ಡಾಯವಾಗಿ ವಿದ್ಯಾಭ್ಯಾಸವನ್ನು ಒದಗಿಸಿಕೊಡುತ್ತೇವೆಂದು ಹೇಳಿದುದನ್ನು ನೀವು ಮಾಡುತ್ತಾ ಇಲ್ಲ. ಇದಕ್ಕೆ ಇನ್ನೂ ಮೂರು ಕೋಟಿ ಅಥವಾ ನಾಲ್ಕು ಕೋಟಿ ರೂಪಾಯಿಗಳನ್ನು ಜಾಸ್ತಿ ಕೊಟ್ಟರೂ ತಪ್ಪಾಗಲಾರದು. ತಾವು ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ಅದರ ಪ್ರಕಾರ 1955 ಮಾರ್ಚಿಯೊಳಗೆ 250 ಪ್ರೈಮರಿ ಸ್ಕೂಲುಗಳು, 150 Basic ಸ್ಕೂಲುಗಳು, 16 N.T.M. ಸ್ಕೂಲುಗಳನ್ನು open ಮಾಡುತ್ತೇವೆಂದು ಹೇಳಿದ್ದೀರಿ. ಅದನ್ನು ನೀವು ಮಾಡಬೇಕಾದುದು ನಿಮ್ಮ ಕರ್ತವ್ಯ. ಮಾಡಿಯೇ ಮಾಡಬೇಕು ಎಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಆ ರೀತಿ ಪ್ರೈಮರಿ ಸ್ಟೇಜಿನಲ್ಲಿ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಮಾಡದೆ ಕೇವಲ University stage ನಲ್ಲಿ ಬಡವರ ದುಡ್ಡು ತೆಗೆದುಕೊಂಡು ನಮ್ಮಂತಹವರಿಗೆ B.A., LL.B. ಕಲಿಯುವುದಕ್ಕೆ ಅನುಕೂಲಮಾಡಿಕೊಟ್ಟರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಸೆನೆಟ್‌ನವರು ಫೀಸ್ ಜಾಸ್ತಿಮಾಡಬೇಕು. ಮತ್ತು ಅವರ ಸಂಪಾದನೆಯನ್ನು ಹೆಚ್ಚಿಸಿಕೊಳ್ಳಬೇಕು. ಪ್ರೈಮರಿ ಸ್ಟೇಜ್‌ನಲ್ಲಿ ಹೆಚ್ಚಿಗೆ ಖರ್ಚುಮಾಡಬೇಕು. ಯೂನಿವರ್ಸಿಟಿಗೆ ಹೆಚ್ಚಾಗಿ ಹಣ ಖರ್ಚುಮಾಡುವುದು ಅನಾವಶ್ಯಕ. ಅಂತಹ ಮೇಧಾವಿಗಳಿದ್ದರೆ ಅವರಿಗೆ ಫ್ರೀಷಿಪ್ ಕೊಡಿ, ಇಲ್ಲದಿದ್ದರೆ ಸ್ಕಾಲರ್‌ಷಿಪ್ ಕೊಡಿ, ಅವರ ಅಂತಸ್ತನ್ನು ಪರೀಕ್ಷೆಮಾಡಿ ಬೇಕಾದಷ್ಟು ಸಹಾಯಮಾಡಿ. ನಾವು ಅತಿ ಉತ್ತಮವಾದ ಪ್ರಗತಿಯನ್ನು ಸಾಧಿಸಿದ್ದೇವೆ. 13½ per cent literacy ಇದ್ದುದು ಈಗ 20·6ಕ್ಕೆ ಬಂದಿದೆ. ಇದು ಎಲ್ಲರೂ ಸಹ ಸಂತೋಷ ಪಡತಕ್ಕಂಥ ವಿಚಾರ. ಈ ಪ್ರಗತಿ 1947ನೇ ಇಸವಿಯಿಂದ ಈಚೆಗೆ ಆಗಿದೆಯೆಂದು ನಾನು ಒತ್ತಿ ಹೇಳುತ್ತೇನೆ. 1947ನೇ ಇಸವಿಯಲ್ಲಿ ಜವಾಬ್ದಾರಿ ಸರ್ಕಾರ ಬಂದು ವಿದ್ಯಾಭ್ಯಾಸಕ್ಕೋಸ್ಕರ ಕೋಟ್ಯಾಂತರ ರೂಪಾಯಿ ಹಣ ಖರ್ಚುಮಾಡಿ Adult education ಕೊಟ್ಟು ಬೇಕಾದಷ್ಟು ಕೆಲಸ ಮಾಡಿದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು ಎಂದು ಹೇಳುತ್ತೇನೆ.

Mr. SPEAKER.—The Hon'ble Member has exceeded his time limit.

ಶ್ರೀ ಜಿ. ಶಿವಪ್ಪ.—Medical ವಿಚಾರದಲ್ಲಿ ಇಡೀ ಮೈಸೂರು ಸಂಸ್ಥಾನದಲ್ಲಿ ನಾವು ಹೆಚ್ಚಿಗೆ ವೈದ್ಯಕೀಯ ಸೌಕರ್ಯ ಹೊಂದಿದ್ದೇವೆ. ನಮ್ಮ ದೇಶದಲ್ಲಿ 60 ಮೈಲಿಗೆ ಒಂದು ವೈದ್ಯಕೀಯ ಸಂಸ್ಥೆ ಇದೆ. ಅದೇ ರೀತಿ veterinary ಸಂಸ್ಥೆ ತೆಗೆದುಕೊಂಡರೆ ಪ್ರತಿ 27 ಸಾವಿರ ಜಾನುವಾರುಗಳಿಗೆ ಒಂದು Institution ಇದೆ. ಆಮೇಲೆ Artificial Insemination ಇತ್ತೀಚೆಗೆ ಅಲ್ಲಲ್ಲಿ ದೇಶಾವಾಳಿ ಆಗುತ್ತಿದೆ. ನಮ್ಮ ಜಿಲ್ಲೆಯಲ್ಲೂ ಇಂತಹವುಗಳು ಆಗಬೇಕೆಂದು ಕೇಳಿಕೊಂಡಿದ್ದೆ. ಅದೇ ರೀತಿ Interpellation ಕಳುಹಿಸಿದ್ದೆ. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ತಕ್ಕ ಉತ್ತರ ಕೊಟ್ಟಿರುತ್ತಾರೆ. ಅದನ್ನು ಜಾಗ್ರತೆ ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇಷ್ಟೆಲ್ಲಾ ಪ್ರಗತಿಯಾಗಿದೆ ಎಂಬುದನ್ನು ಅಂಕಿ ಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ. ಕಣ್ಣು ಮುಚ್ಚಿ ಕೂತುಕೊಂಡರೆ ಗೊತ್ತಾಗುವುದಿಲ್ಲ. ಬೇಕಾದಷ್ಟು ಅಂಕಿ ಅಂಶಗಳಿವೆ ; ಆದರೆ ಕಾಲಾವಕಾಶವಿಲ್ಲದೆ ಇರುವುದರಿಂದ ಅವುಗಳನ್ನು ಹೇಳಲು ಅಪೇಕ್ಷೆ ಪಡುವುದಿಲ್ಲ. ಇಷ್ಟೆಲ್ಲಾ ಆದಮೇಲೆ ಒಂದು ಅತಿ ಮುಖ್ಯವಾದ ವಿಚಾರವನ್ನು ಈ ಸಭೆಯ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. Production ಜಾಸ್ತಿ ಆಗುತ್ತಿದೆ. ಆಹಾರ ಸಾಮಗ್ರಿಗಳು ಜಾಸ್ತಿ ಆಗುತ್ತಿವೆ. ನಮ್ಮ ದೇಶದ ಜನಸಂಖ್ಯೆ ವಿಪರೀತವಾಗಿ ಹೆಚ್ಚುತ್ತಾ ಇದೆ, ಇದನ್ನು ತಡೆಗಟ್ಟುವುದಕ್ಕೆ ಸರಕಾರದವರು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಮೊದಲು ಮಾನ್ಯ ಸದಸ್ಯರು ಆ ನಿಯಮವನ್ನು ಪಾಲಿಸುತ್ತಿದ್ದಾರೆಯೋ ಎಂಬುದನ್ನು ಕೇಳುತ್ತೇನೆ.

ಶ್ರೀ ಜಿ. ಶಿವಪ್ಪ.—ವೈಯಕ್ತಿಕವಾಗಿ ಯಾರನ್ನೂ ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುತ್ತಾ ಇಲ್ಲ. ಎಷ್ಟರ ಮಟ್ಟಿಗೆ ನಮ್ಮ ಜನಸಂಖ್ಯೆ ಹೆಚ್ಚಾಗುತ್ತಿದೆ ಎನ್ನತಕ್ಕ ವಿಚಾರದಲ್ಲಿ ಅನೇಕ ಆರ್ಥಿಕ ತಜ್ಞರೂ ಲೇಖನಗಳನ್ನು ಬರೆದಿದ್ದಾರೆ. ಆದರೆ ಬರೆದರೂ ಸಾಲದು ವಿಚಾರ ತಿಳಿದುಕೊಂಡರೂ ಸಾಲದು ; ಪ್ರತಿಬಂಧಕ ಮಾಡುವುದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಹತ್ತು ವರ್ಷದ ಹಿಂದೆ ಇದ್ದ ಜನಸಂಖ್ಯೆಗಿಂತ ಈಗ ನಮ್ಮ ಸಂಸ್ಥಾನದಲ್ಲಿ ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಇವರೆಲ್ಲರಿಗೂ ಆಹಾರ, ಬಟ್ಟೆ, ಮನೆ, ಇವುಗಳನ್ನು ಒದಗಿಸುವುದು ಹೇಗೆ ಸಾಧ್ಯ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇದು ಲಘುವಾಗಿ ಯೋಚನೆ ಮಾಡತಕ್ಕಂಥ ಪ್ರಶ್ನೆಯಲ್ಲ. ಬಹಳ ದೂರದೃಷ್ಟಿಯಿಂದ ಯೋಚನೆ ಮಾಡತಕ್ಕಂಥ ಪ್ರಶ್ನೆಯಾಗಿದೆ. ಅದರಲ್ಲಿ ಸರ್ಕಾರದ ಕರ್ತವ್ಯವಿದೆ. ಸರ್ಕಾರ ಒಳ್ಳೆಯ ದೃಷ್ಟಿಯಿಂದ ನಮಗೆ ವೈದ್ಯಕೀಯ ಸಹಾಯ, ಇತರ ಅನುಕೂಲ

(ಶ್ರೀ ಜಿ. ಶಿವಪ್ಪ.)

ಗಳನ್ನು ಕಲ್ಪಿಸಿಕೊಟ್ಟಿರುವುದರಿಂದ, death-rate ಕಡಮೆಯಾಗುತ್ತಿದೆ, birth-rate ಜಾಸ್ತಿಯಾಗುತ್ತಿದೆ. ಒಂದೇ ಒಂದ ಉದಾಹರಣೆ ಹೇಳಬೇಕು. Infantile mortality ಯಂದ 1941ನೇ ಇಸವಿಯೊಳಗೆ 1,000 ಜನಕ್ಕೆ 150 ಜನ ಸಾಯುತ್ತಿದ್ದರು. 1951 ರಲ್ಲಿ 1,000 ಜನಕ್ಕೆ 125 ಜನ ಮಾತ್ರ ಸಾಯುತ್ತಿದ್ದಾರೆ. Maternal mortality ಯಲ್ಲಿಯೂ ಕೂಡ ಅದೇ ರೀತಿ death-rate ಕಡಮೆಯಾಗುತ್ತಿದೆ. Density of Population 1941 ನೇ ಇಸವಿಯೊಳಗೆ ಮೈಸೂರು ಸಂಸ್ಥಾನದಲ್ಲಿ ಕೇವಲ ಒಂದು ಚದರ ಮೈಲಿಗೆ 280 ಜನರು ಇದ್ದರು. ಇವೊತ್ತಿನ ದಿವಸ 308 ಜನರು ಇದ್ದಾರೆ. ಎಲ್ಲರಿಗೂ ಮನೆ ಕೊಡಬೇಕು, ಜಮೀನು ಕೊಡಬೇಕು, ಬಟ್ಟೆ ಕೊಡಬೇಕು, ಪ್ರತಿಯೊಂದೂ ಕೊಡಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ನಾವು ಏನು ಮಾಡಬೇಕೆಂದು ತಮ್ಮ ಸಲಹೆ ?

ಶ್ರೀ ಜಿ. ಶಿವಪ್ಪ.—ಇದೇ ರೀತಿ ಮೈಸೂರು ಸಂಸ್ಥಾನದ production ಬಹಳ ಜಾಸ್ತಿಯಾಗುತ್ತಿದೆ. All-India increase ಶೇಕಡ 12 ಇದ್ದರೆ ನಮ್ಮ ಮೈಸೂರು ಸಂಸ್ಥಾನದ increase ಶೇಕಡ 23·7 ಆಗಿದೆ. Activity of our productive machinery in the State has been increased ಎಂದು censusನವರು ವರದಿ ಮಾಡಿದ್ದಾರೆ.

ಆಮೇಲೆ Medical Aid ವಿಚಾರದಲ್ಲಿ ಒಂದು ವಿಷಯ ಗಮನಿಸಬೇಕಾಗಿದೆ. 1951ನೆಯ ಇಸವಿಯಲ್ಲಿ ನಾವು ಈ ಬಾಬಿನಲ್ಲಿ ತಲೆಯೊಂದಕ್ಕೆ 4 ಅಣೆ 6 ಕಾಸು ಖರ್ಚು ಮಾಡುತ್ತಿದ್ದೆವು! ಈ ಹೊತ್ತು 15 ಅಣೆ 6 ಕಾಸು ಖರ್ಚು ಮಾಡುತ್ತಿದ್ದೇವೆ. ಇದರ ಪ್ರಭಾವದಿಂದ ನಮ್ಮ ದೇಶದಲ್ಲಿ ಸಾವಿನ ಸಂಖ್ಯೆ ಕಡಮೆಯಾಗಿ ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಆದ್ದರಿಂದ ಈಗ ನಾವು ಜನಸಂಖ್ಯೆ ಜಾಸ್ತಿಯಾಗದಿರುವಂತೆ ಅದನ್ನು ತಡೆಗಟ್ಟುವುದಕ್ಕೆ ತಕ್ಕ ಕಾರ್ಯಕ್ರಮ ಕೈಕೊಳ್ಳುವುದು ಅವಶ್ಯಕವಾಗಿದೆ. ಪ್ಲಾನಿಂಗ್ ಕಮಿಷನ್ನಿನವರೂ ಇದಕ್ಕಾಗಿಯೇ 65 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ಅದನ್ನು ಯಾವ ರೀತಿ ಖರ್ಚು ಮಾಡಬೇಕೆಂಬುದನ್ನು ನಾವೀಗ ಯೋಚನೆ ಮಾಡಬೇಕು. ಹೆಚ್ಚಿಗೆ ಫ್ಯಾಮಿಲಿ ಪ್ಲಾನಿಂಗ್ ಸೆಂಟರ್‌ಗಳನ್ನು ಏರ್ಪಡಿಸುವುದು ಈಗ ತುರ್ತಾಗಿ ಕೈಕೊಳ್ಳಬೇಕಾದ ಒಂದು ಕಾರ್ಯಕ್ರಮ. ಇದರ ಜೊತೆಗೆ ಇತರೇ ವಿಧಾನಗಳನ್ನನುಸರಿಸಿ ಜನಸಂಖ್ಯೆಯ ಬೆಳವಣಿಗೆಯ ವೇಗವನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಸೂಕ್ತ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಸಂಯಮವನ್ನು ಬೋಧಿಸುವುದು, ಯುಕ್ತ ವೈದ್ಯಕೀಯ ಸಹಾಯವನ್ನು ಒದಗಿಸುವುದು ಇವೇ ಮುಂತಾದುವುಗಳ ಕಡೆ ಸರ್ಕಾರದವರು ತೀವ್ರ ಗಮನ ಕೊಡಬೇಕೆಂದು ಹೇಳುತ್ತೇನೆ. ಮೊನ್ನೆ, ಇದೇ ವಿಚಾರವಾಗಿ ಒಂದು ಪ್ರಶ್ನೆ ಸಭೆಯ ಮುಂದೆ ಬಂದಾಗ ಸಂಸ್ಥಾನಾ ಮಳೆ ಎಲ್ಲೆಲ್ಲಿ ಫ್ಯಾಮಿಲಿ ಪ್ಲಾನಿಂಗ್ ಕೇಂದ್ರಗಳಿವೆಯೆಂದು ಕೇಳಿದ್ದಕ್ಕೆ ಸಮರ್ಪಕವಾದ ಜವಾಬು ಕೊಡಲಿಲ್ಲ. ರಾಮನಗರಂನಲ್ಲಿ ಏರ್ಪಡಿಸಿರುವ ಒಂದು ಕೇಂದ್ರವೂ ಕೂಡ ಅಷ್ಟು ಉತ್ತೇಜನಕರವಾಗಿ ಕೆಲಸ ಮಾಡುತ್ತಿಲ್ಲವೆಂದು ಅಭಿಪ್ರಾಯ ಕೊಟ್ಟರು. ಜನರು ಈ ಕೇಂದ್ರಗಳಿಗೆ ಹೆಚ್ಚಿಗೆ ಉತ್ತೇಜನ ಕೊಡದೆ ಇದ್ದರೂ ಸರ್ಕಾರದವರು ಪ್ರಯತ್ನಪಟ್ಟು ಇವುಗಳ ಚಟುವಟಿಕೆಗಳಲ್ಲಿ ಜನರ ಉತ್ಸಾಹವನ್ನು ಹೆಚ್ಚಾಗಿ ಕುದುರಿಸಲು ಶ್ರಮಿಸಬೇಕು. ಪಾಶ್ಚಿಮಾತ್ಯ ದೇಶಗಳಲ್ಲಿ ನೋಡುವುದಾದರೆ, ಅಲ್ಲಿ ಇಂಥ ಕೇಂದ್ರಗಳಿಗೆ ಜನರು ವಿಶೇಷ ಪ್ರೋತ್ಸಾಹವನ್ನು ನೀಡುತ್ತಾರೆ. ಇದಕ್ಕೆ ಒಂದು ಕಾರಣ ಅವರಲ್ಲಿ ವಿದ್ಯಾವಂತರು ಜಾಸ್ತಿ. ನಮ್ಮ ದೇಶದಲ್ಲಿ ಜನನ ಜಾಸ್ತಿಯಾಗಿ ಜನಸಂಖ್ಯೆ ಹೆಚ್ಚಿದರೆ, ಎಲ್ಲರಿಗೂ ಆಹಾರವನ್ನೊದಗಿಸುವುದು ಕಷ್ಟ. ಸರಿಯಾಗಿ ಪೋಷಣೆ ಮಾಡುವುದಕ್ಕಾಗದೆ ಹೋದರೆ ನಮ್ಮ ಜನಾಂಗದ ಭವಿಷ್ಯ ಹೇಗಿರುತ್ತದೆಂಬುದನ್ನು ನೀವೇ ಊಹಿಸಬಹುದು.

ಸಂಸ್ಕೃತಿ ಪ್ರಚಾರದ ವಿಚಾರವಾಗಿ ಅನೇಕ ವಿಚಾರಗಳನ್ನು ಮಾತನಾಡಬೇಕೆಂದಿದ್ದೆ. ಆದರೆ, ಹೋದವರ್ಷ ನಾನ ಮಾತನಾಡಿದಷ್ಟೂ ಇನ್ನೂ ಇದರ ಚಟುವಟಿಕೆ ಜಾಸ್ತಿಯಾದದ್ದರಿಂದ ನಾನು ಹೆಚ್ಚಿಗೆ ಹೇಳುವುದರಿಂದ ಏನೂ ಪ್ರಯೋಜನವಾಗಲಾರದು. ಆದರೂ ಒಂದು ವಿಚಾರ ಹೇಳುವುದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ. ನಮ್ಮ ಸಂಸ್ಥಾನದಲ್ಲಿ ಸಂಸ್ಕೃತಿ ಪ್ರಚಾರಕ್ಕೆ ಸಂಬಂಧಪಟ್ಟ ಹಾಗೆಯೇ ಅನೇಕ ತೆರದ ಸಂಸ್ಥೆಗಳು, ಇಲಾಖೆಗಳು ಕೆಲಸಮಾಡುತ್ತಿವೆ. ಒಂದು ವಯಸ್ಕರ ಶಿಕ್ಷಣ ಸಮಿತಿ ; ಇನ್ನೊಂದು ನೃತ್ಯ, ನಾಟ್ಯ ಮುಂತಾದ ಕಲೆಗಳ ಶಾಲೆ ; ಸೇವಾದಳವೆಂಬುದು ಮತ್ತೊಂದು—ಈ ರೀತಿ ಅನೇಕ ಸಂಸ್ಥೆಗಳು ಕೆಲಸಮಾಡುತ್ತಿವೆ. ನಾನೂ ಕೆಲವುಕಡೆ ಅಧ್ಯಕ್ಷತೆ ವಹಿಸಲಿಕ್ಕೆ ಹೋದಾಗ ನೋಡಿದ್ದೇನೆ. ಎಲ್ಲಾ ಸಂಸ್ಥೆಗಳೂ ಏರ್ಪಡಿಸುವುದು ಅದೇ ಶಿವಪುರಾಣ, ಅದೇ ಲಾವಣಿ, ಅದೇ ಉಪನ್ಯಾಸ ! ಆದ್ದರಿಂದ, ಈ ಸಂಸ್ಥೆಗಳನ್ನೆಲ್ಲಾ ಒಂದುಗೂಡಿಸಿ ಅಡಲ್ಟ್ ಲಿಟ್ರಸಿ ಸಂಸ್ಥೆಯ ಮೂಲಕವೇ ಈ ಎಲ್ಲಾ ಕಾರ್ಯಚಟುವಟಿಕೆಗಳನ್ನೂ ಏರ್ಪಡಿಸಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಬೇರೆಬೇರೆಯ ಸಂಸ್ಥೆಗಳ ಮೂಲಕ ಮಾಡುವುದರಿಂದ ಖರ್ಚು ಜಾಸ್ತಿಯಾಗುತ್ತದೆ. ಇದನ್ನು ಹೇಳುವಾಗ ನಾನು ಯಾರ ಮೇಲೆಯೂ ಯಾವ ಉದ್ದೇಶವನ್ನೂ ಇಟ್ಟುಕೊಳ್ಳದೆ ಸರ್ಕಾರದ ಹಣದಲ್ಲಿ ಪ್ರತಿಯೊಂದು ಕಾಸೂ ನ್ಯಾಯವಾಗಿ ಖರ್ಚಾಗುವಂತೆ ಮಾಡಬೇಕೆಂಬ ಭಗವತ್ ಪ್ರೇರಣೆಯಿಂದ ಹೇಳುತ್ತಿದ್ದೇನೆಂದು ಮಾನ್ಯಸದಸ್ಯರು ತಿಳಿದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಪಬ್ಲಿಕ್‌ವರ್ಕ್ಸ್ ಇಲಾಖೆಯ ವಿಚಾರದಲ್ಲಿ ಎರಡೇ ಎರಡು ಮಾತುಗಳನ್ನು ಹೇಳಿ ನಿಲ್ಲಿಸುತ್ತೇನೆ. ಇದು ನಮ್ಮ ದೇಶದಲ್ಲಿ 'increased State activities' ಕಾಣಬರುತ್ತಿದೆಯೆಂದು ಹೇಳಿರುವುದಕ್ಕೆ ಸಂಬಂಧಪಟ್ಟಿದೆ. ಎಸ್ಟಿಮೇಟುಗಳು ತಯಾರಾಗಿ ಎಲ್ಲಿ ಹೋಗುತ್ತವೆಯೋ ಎಲ್ಲಿ ಬಿಳುತ್ತವೆಯೋ ಆ ಭಗವಂತನಿಗೊಬ್ಬನಿಗೇ ಗೊತ್ತು ! ಏಕೆಂದರೆ ಈ ಅಸೆಂಬ್ಲಿ ಸದಸ್ಯನಾಗಿ ಬಂದು ಕಳೆದ ಮೂರು ವರ್ಷಗಳಿಂದಲೂ ನಮ್ಮ ಭಾಗದಲ್ಲಿರುವ ನಾಲ್ಕಾರು ಕೆರೆಗಳನ್ನು ಕಟ್ಟಿಸಿಕೊಡಬೇಕೆಂದು ಕೇಳುತ್ತಲೇ ಇದ್ದೇನೆ. ಇದುವರೆಗೂ ಇನ್ನೂ ಆಗಿಲ್ಲ. ಆ ಕೆರೆಗಳ ಪಟ್ಟಿಯನ್ನು ಆ ಮೇಲೆ ಬೇಕಾದರೆ ಕೊಡುತ್ತೇನೆ. ಈ ವರ್ಷವಾದರೂ ಬಡ್ಜೆಟ್ಟಿನಲ್ಲಿ ಸೇರಿಸಿ ಎಸ್ಟಿಮೇಟ್‌ಮಾಡಿಸಿ ಕೆಲಸವನ್ನು ಕೈಕೊಳ್ಳಬೇಕೆಂದು ಹೇಳುತ್ತೇನೆ—Irrigation works ವಿಚಾರದಲ್ಲಿ ನಮ್ಮ ಮಿತ್ರರಾದ ಮ್ಯಾಸ್ಕ್ರಿನ್ಹಾಸ್‌ರವರು ಒಂದುವಾದ ಮಾಡಿದರು. ಈಗಿರುವಷ್ಟೇ ನೀರಾವರೀ ಕಾಮಗಾರಿಗಳು ನಮಗೆ ಸಾಕು, ಇನ್ನು ಮುಂದೆ ಇದಕ್ಕೆ ಖರ್ಚುಮಾಡಬೇಕಾದ ಅವಶ್ಯಕವಿಲ್ಲ ಎಂದು ಹೇಳಿದರು. ಇದು ಸರಿಯಾದ ವಾದವಲ್ಲ. ಇವೊತ್ತು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನೋಡುವುದಾ

ದರೆ, ಅಲ್ಲಿನ ಸರ್ಕಾರಗಳು ಸಮುದ್ರಕ್ಕೆ ಹೋಗುವ ನೀರಿನಲ್ಲಿ 30—40 ಶೇಕಡ ರಷ್ಟು ತಡೆಗಟ್ಟಿದ್ದಾರೆ. ನಮ್ಮಲ್ಲಾದರೋ ಕೇವಲ 3—4 ಶೇಕಡವರೆಗೆ ಮಾತ್ರ ನಮಗೆ ತಡೆಗಟ್ಟಲು ಸಾಧ್ಯವಾಗಿದೆ. ನಾವು ಬದುಕುವುದೂ, ಸಾಯುವುದೂ ನಿರಾವರಿಯಿಂದ ಎಂಬುದನ್ನು ತಾವು ಮನಗಾಣಬೇಕು. ನಮ್ಮ ಅಳಿವು ಉಳಿವು ಇರುವುದು ನಿರಾವರಿ ಯೋಜನೆಗಳಲ್ಲಿ. ಎಲ್ಲಿಯವರೆಗೆ ಹಿಂದೂದೇಶ ಶೇಕಡ 70 ರಷ್ಟು ವ್ಯವಸಾಯದ ದೇಶವಾಗಿರುತ್ತದೋ ಅಲ್ಲಿಯವರೆಗೂ ನಮಗೆ ನಿರಾವರಿ ಯೋಜನೆಗಳಿಲ್ಲದೆ ಆಗುವುದಿಲ್ಲ; ರೈತಾಪಿ ವರ್ಗಕ್ಕೆ ಸೇರಿದ ಶ್ರೀಮಾನ್ ಮಂಜಪ್ಪನವರಿಗೆ ಇದು ಚೆನ್ನಾಗಿ ಗೊತ್ತಿದೆಯೆಂದು ನಾನು ಭಾವಿಸುತ್ತೇನೆ.

ಇನ್ನು ನಮ್ಮ ಜಿಲ್ಲೆಯಲ್ಲಿರುವ ರಸ್ತೆಗಳ ವಿಚಾರ. ಈಚೆಗೆ ರೋಡ್ ಕ್ಲಾಸಿಫಿಕೇಷನ್ ಸ್ಕೀಂ ಬಂದಮೇಲೆ ನಮ್ಮ ಡಿಸ್ಟ್ರಿಕ್ಟ್‌ಬೋರ್ಡ್ ರಸ್ತೆಗಳನ್ನು ಕೇಳುವವರೇ ಇಲ್ಲ. ಖಂಡಿತವಾಗಿಯೂ ಅವುಗಳಮೇಲೆ ಈಚೆಗೆ ಒಂದು ಪುಟ್ಟಿ ಕಲ್ಲನ್ನಾಗಲಿ, ಒಂದು ಪುಟ್ಟಿ ಮಣ್ಣನ್ನಾಗಲಿ ಯಾರೂ ಹಾಕಿರುವುದನ್ನು ನೋಡಿಲ್ಲ. ಹಿಂದೆ ಇವೆಲ್ಲಾ ಸ್ಟೇಟ್ ಫಂಡ್ ರೋಡ್‌ಗಳಾಗಿದ್ದು ಚೆನ್ನಾಗಿದ್ದವು. ಈಗ ರೋಡ್ ರೀ-ಕ್ಲಾಸಿಫಿಕೇಷನ್ ಆಗಿ ಇವೆಲ್ಲಾ ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿ ಈಗ ಕೇಳುವವರೇ ಇಲ್ಲದಂತಾಗಿವೆ.

Sri Kadidal MANJAPPA.—What the Hon'ble Member says is incorrect. They were District Board Roads even before.

ಶ್ರೀ ಜಿ. ಶಿವಪ್ಪ.—ನಾನು ಡಿಸ್ಟ್ರಿಕ್ಟ್ ಬೋರ್ಡಿನಲ್ಲೇ ಇದ್ದವನು. ನನಗೆ ಚೆನ್ನಾಗಿ ಗೊತ್ತು. ನಮ್ಮ ಕಡೆ 8-10 ರಸ್ತೆಗಳು ಅತಿಮುಖ್ಯವಾದವುಗಳಾಗಿವೆ. ಅನೇಕ ಬಸ್ಸುಗಳು ಓಡಾಡುತ್ತಿದ್ದು, ಈಗ ಅವುಗಳ ಸ್ಥಿತಿ ಬಹಳ ಶೋಚನೀಯವಾಗಿದೆ. ಅವನ್ನು ಸರಿ ಮಾಡಿಸಬೇಕು.

ಸರ್ಕಾರದವರು ಈಗ ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ತಯಾರುಮಾಡುತ್ತಿದ್ದಾರೆ ಇದು ಬಹಳ ಸಂತೋಷಕರವಾದ ವಿಚಾರ. ಆದರೆ ಒಂದು ವಿಷಯವನ್ನು ತಮ್ಮಗಮನಕ್ಕೆ ತರಬೇಕು. ಹಳ್ಳಿಗಾಡಿನವರ ಸ್ಥಿತಿಯನ್ನು ತಾವು ಮರೆಯಕೂಡದು. ಸಿಟಿಗಳ ವಿಷಯದಲ್ಲಾದರೋ ಯಥೇಚ್ಛವಾಗಿ ಹಣವನ್ನು ಒದಗಿಸುತ್ತಿದ್ದೀರಿ. ಹೋದ ವರ್ಷ ಸದಸ್ಯರುಗಳು ಗಲಾಟೆ ಮಾಡಿದುದರ ಮೇಲೆ ಸ್ವಲ್ಪಮಟ್ಟಿಗೆ ಹಳ್ಳಿಗಳಿಗೆ ಹಣ ಒದಗಿಸುತ್ತಿದ್ದೀರಿ. ಇನ್ನೂ ಹೆಚ್ಚು ಹೆಚ್ಚಿಗೆ ಹಣ ಒದಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ, ಈಗಲೂ ತಾವು ಹಳ್ಳಿಗಾಡಿನ ಕಡೆ ನೋಡುವುದಾದರೆ, ನೀವು ಕೊಟ್ಟಿರುವ ಸೆನ್ಸಸ್ ಲೆಕ್ಕದ ಪ್ರಕಾರವೇ ಕೇವಲ 10 ಶೇಕಡ ವಿದ್ಯಾವಂತರಿದ್ದಾರೆ. ಸಿಟಿಗಳಲ್ಲಾದರೋ 40 ಶೇಕಡ ಇದ್ದಾರೆ. ಮೈಸೂರು ಸಂಸ್ಥಾನದಲ್ಲಿರುವ ಗ್ರಾಜುಯೇಟರುಗಳ ಸಂಖ್ಯೆಯೆಷ್ಟೋ ಅದರಲ್ಲಿ ಅರ್ಧಕ್ಕಿಂತ ಮೇಲ್ಪಟ್ಟಷ್ಟು ಜನ ಬೆಂಗಳೂರು ಸಿಟಿಯೊಂದರಲ್ಲೇ ಇದ್ದಾರೆ. ಇದಕ್ಕೆ ಕಾರಣ, ಈ ಸಿಟಿಗಳಲ್ಲಿರುವವರು ಸಂಘ, ಸಂಸ್ಥೆಗಳನ್ನು ಸ್ಥಾಪನೆಮಾಡಿಕೊಂಡು ಪ್ರೆಸ್ ಮತ್ತು platform ಗಳ ಮುಖಾಂತರ ತಮ್ಮ ತಮ್ಮ ಇಷ್ಟಾರ್ಥಗಳನ್ನು ಒದಗಿಸಿಕೊಳ್ಳಬಲ್ಲರು, ಹಳ್ಳಿಗಾಡಿನವರಿಗೆ ಇದೊಂದೂ ತಿಳಿಯದು. ಈ drawbackನ್ನು ಮನಗಂಡು ಹಳ್ಳಿಗಾಡಿನವರ ಕುಂದುಕೊರತೆಗಳ ಕಡೆ ಹೆಚ್ಚಿಗೆ ಗಮನಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಕುಡಿಯುವ ನೀರಿನ ಸರಬರಾಯಿಗಾಗಿ ತಾವು ಹಳ್ಳಿಗಾಡಿನವರಿಗೆ ಕೇವಲ 10 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ. ಸಿಟಿಗಳಿಗಾದರೋ ಕೋಟ್ಯಂತರ ರೂಪಾಯಿಗಳನ್ನು ಒದಗಿಸಿದ್ದೀರಿ. ಹಳ್ಳಿಗಾಡಿನವರಿಗೆ 10 ಲಕ್ಷ ರೂಪಾಯಿಗಳೆಂದರೆ ಏನೇನೂ ಸಾಲದು, ಇದನ್ನು ಹೆಚ್ಚಿಸಬೇಕೆಂದು ನನ್ನ ಪ್ರಾರ್ಥನೆ.

ಎರಡನೆಯ ಪಂಚವಾರ್ಷಿಕ ಯೋಜನೆಯ ಸಂಬಂಧದಲ್ಲಿ ಒಂದು ಅತಿಮುಖ್ಯವಾದ ವಿಚಾರವನ್ನು ಹೇಳಬೇಕೆಂದಿದ್ದೇನೆ. ಅದೇನೆಂದರೆ, ಪ್ರತಿ ಹಳ್ಳಿ ಹಳ್ಳಿಗೂ ರಸ್ತೆಗಳನ್ನು ಏರ್ಪಡಿಸುವುದು, ಗ್ರಾಮಾಂತರಗಳ ಕಡೆ ಸಂಚಾರ ಸೌಲಭ್ಯಗಳನ್ನು ಒದಗಿಸಿಕೊಡುವುದು ಅತ್ಯಾವಶ್ಯಕ. ಒಂದು ರಾಷ್ಟ್ರ ಮುಂದುವರಿದಿದೆಯೋ ಇಲ್ಲವೋ ಎಂಬದನ್ನು ಅಳೆಯುತಕ್ಕ ಒಂದು ಸಾಧನವೆಂದರೆ ಅಲ್ಲಿರತಕ್ಕ ರಸ್ತೆಗಳು. ಆದ್ದರಿಂದ ಪ್ರತಿ ಹಳ್ಳಿಹಳ್ಳಿಗೂ ರಸ್ತೆಗಳಿರುವಂತೆ ಮಾಡುವುದು ಅತ್ಯಾವಶ್ಯಕ.

ಕೋ-ಆಪರೇಷನ್ ವಿಚಾರದಲ್ಲಿ ಒಂದು ಮಾತು. ಇದು ಸಹಕಾರ ಯುಗವೆಂದು ತಾವು ಎಲ್ಲೆಲ್ಲೂ ಭಾಷಣ ಮಾಡುತ್ತಿದ್ದೀರಿ. ಆದರೆ ಕಾರ್ಯತಃ ನೋಡಿದಲ್ಲಿ ಅವುಗಳ ಅಭಿವೃದ್ಧಿಗೆ ಸಾಕಷ್ಟು ಸಹಾಯವನ್ನು ಕೊಡುತ್ತಿಲ್ಲ. ಈಚೆಗೆ ತಾವೊಂದು ಆರ್ಡರ್ ಹೊರಡಿಸಿ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ವ್ಯವಹಾರಗಳ ಸಂಬಂಧದಲ್ಲಿ ರಿಜಿಸ್ಟ್ರೇಷನ್ ಫೀಯನ್ನು ವಸೂಲು ಮಾಡುತ್ತಿದ್ದೀರಿ. ಇದನ್ನು ತಪ್ಪಿಸಬೇಕು. ಸ್ಟಾಂಪ್ ಡ್ಯೂಟಿಯ ವಿಷಯದಲ್ಲೂ ತಾವು ಕೊಟ್ಟಿರತಕ್ಕ ವಿನಾಯಿತಿಗಳು ನಾಳೆಯಿಂದ expire ಆಗುತ್ತದೆ. ಆದ್ದರಿಂದ ಸಹಕಾರ ಸಂಸ್ಥೆಗಳ ಅಭಿವೃದ್ಧಿಯ ದೃಷ್ಟಿಯಿಂದ ರಿಜಿಸ್ಟ್ರೇಷನ್ ಮತ್ತು ಸ್ಟಾಂಪ್ ಡ್ಯೂಟಿಯನ್ನು ವಜಾಮಾಡಬೇಕೆಂದು ಹೇಳುತ್ತಾ, ಅಧ್ಯಕ್ಷರು ನನಗೆ ಇಷ್ಟು ಹೊತ್ತು ಕೊಟ್ಟ ಅವಕಾಶಕ್ಕಾಗಿ ಅವರನ್ನು ವಂದಿಸುತ್ತೇನೆ.

Sri A. BHEEMAPPA NAIK.—Let us close the session today because somebody has invited all the Members for tea.

Mr. SPEAKER.—The House will now rise and meet tomorrow at 12 o'clock.

The House adjourned at Forty-five Minutes past Five of the Clock to meet again at Twelve of the Clock on Thursday, the 10th March 1955.

WD 4508—GPB—550—5-5-55